2018 ಕ.ತೀ.ವ. 197

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಕೆ.ಎನ್. ಫಣೀಂದ್ರ

## ಶ್ರೀಮತಿ ನಸ್ರೀನ್ ಪಾಷಾ –ವಿರುದ್ಧ– ಶ್ರೀ ಮಲಿಕ್ ಅಹ್ಮದ್*

ದಂಡ ಪ್ರಕ್ರಿಯಾ ಸಂಹಿತೆಯ 401ನೇ ಪ್ರಕರಣದೊಂದಿಗೆ ಓದಲಾದ 397ನೇ ಪ್ರಕರಣದ ಅಡಿಯಲ್ಲಿ ಸಲ್ಲಿಸಲಾದ ಕ್ರಿಮಿನಲ್ ಪುನರೀಕ್ಷಣಾ ಅರ್ಜಿ.

ಭಾರತೀಯ ಸಾಕ್ಷ್ಯ ಅಧಿನಿಯಮ, 1872ರ 73ನೇ ಪ್ರಕರಣ.

ಪುನರ್ ಪರಿಶೀಲನಾ ಅರ್ಜಿದಾರರು ವರ್ಗಾವಣೀಯ ಲಿಖಿತ ಅಧಿನಿಯಮದ 138ನೇ ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧಕ್ಕಾಗಿ ಮತ್ತು ಆರು ತಿಂಗಳ ಅವಧಿಗೆ ಸಾದಾ ಕಾರಾವಾಸ ಶಿಕ್ಷೆಯನ್ನು ವಿಧಿಸಿದ್ದಕ್ಕಾಗಿ ಮತ್ತು ಒಂದು ತಿಂಗಳ ಅವಧಿಯವರೆಗಿನ ಸಾದಾ ಕಾರಾವಾಸಕ್ಕೆ ಒಳಗಾಗಿದ್ದ ಕಲಂನ್ನು ತಪ್ಪುವ ಮೂಲಕ 1,60,000/– ರೂ.ಗಳ ಜುಲ್ಮಾನೆಯನ್ನು ಸಹ ವಿಧಿಸಿದ ಮತ್ತು ಜುಲ್ಮಾನೆಯ ಮೊತ್ತವಲ್ಲದೆ ದೂರುದಾರನಿಗೆ ನಷ್ಟ ಪರಿಹಾರವೆಂದು ಸಂದಾಯ ಮಾಡಬೇಕಾದ 1,50,000/– ರೂ. ಮೊತ್ತವನ್ನು ಸಹ ನೀಡುವುದಕ್ಕೆ ಸಂಬಂಧಿಸಿದಂತೆ ದಿನಾಂಕ 25.8.2012 ರಂದು ಸಿಸಿ ಸಂ.439/2008ರಲ್ಲಿ ಜೆಎಂಎಫ್‌ಸಿ, ಗುಬ್ಬಿ ಇವರು ಹೊರಡಿಸಿದ ತೀರ್ಪನ್ನು ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು ತುಮಕೂರು ಇವರು ಹೊರಡಿಸಿದ ದಿನಾಂಕ 20.11.2015ರ ಕ್ರಿಮಿನಲ್ ಅಪೀಲು ಸಂ.124/ 2012ರಲ್ಲಿ ಇದನ್ನು ದೃಢಪಡಿಸಿದ ತೀರ್ಪನ್ನು ವಜಾಗೊಳಿಸಲು ಕೋರಿ ಈ ಪುನರ್ ಪರಿಶೀಲನಾ ಅರ್ಜಿಯನ್ನು ಹೂಡಿದ್ದಾರೆ.

ಉಚ್ಚ ನ್ಯಾಯಾಲಯಕ್ಕೆ, ಸಾಕ್ಷ್ಯಾಧಾರ ತಪ್ಪಾಗಿದೆಯೆಂದು ಅಥವಾ ಕಾನೂನಿನಲ್ಲಿ ಅಥವಾ ಪ್ರಕ್ರಿಯೆಯಲ್ಲಿ ದೋಷಯುಕ್ತವಾಗಿವೆಯೆಂದು, ಸಾಕ್ಷ್ಯವನ್ನು ತಪ್ಪಾಗಿ

*ಕ್ರಿಮಿನಲ್ ಪುನರೀಕ್ಷಣಾ ಅರ್ಜಿ ಸಂ.52/2016, ದಿನಾಂಕ: 5ನೇ ಆಗಸ್ಟ್, 2016.

ಪರಿಭಾವಿಸಿದೆಯೆಂದು ಅಥವಾ ಸಾಕ್ಷ್ಯವನ್ನು ತಪ್ಪಾಗಿ ಓದಿಕೊಳ್ಳಲಾಗಿದೆಯೆಂದು ಕಂಡು ಬಂದರೆ ನಿಹಿತವಾದ ಅಧಿಕಾರಗಳನ್ನು ಚಲಾಯಿಸಲು ವಿಫಲವಾಗಿರುವುದನ್ನು ಅಥವಾ ಅಧಿಕಾರ ವ್ಯಾಪ್ತಿಯನ್ನು ತಪ್ಪಾಗಿ ಚಲಾಯಿಸಲಾಗಿದೆಯೆಂದು ಕಂಡು ಬಂದರೆ ದಾಖಲೆಯಲ್ಲಿರುವ ಸಾಕ್ಷ್ಯಾಧಾರಗಳನ್ನು ಪರಿಗಣಿಸಿ ದಂಡ ಪ್ರಕ್ರಿಯಾ ಸಂಹಿತೆಯ 397 ಅಥವಾ 401ನೇ ಪ್ರಕರಣಗಳ ಮೇರೆಗೆ ತನ್ನ ಅಧಿಕಾರವನ್ನು ಉಚ್ಚ ನ್ಯಾಯಾಲಯವು ಚಲಾಯಿಸಬಹುದು. ವಿಸ್ತೃತ ಪ್ರತಿಪಾದನೆಯಾಗಿರುವ ಕಾರಣದಿಂದ, (ಎ) ನಿರ್ಣಯವು, ಒಟ್ಟಾರೆಯಾಗಿ ತಪ್ಪಾಗಿದ್ದಲ್ಲಿ; (ಬಿ) ಕಾನೂನಿನ ಉಪಬಂಧಗಳಿಗೆ ಅನುಸಾರವಾಗಿರದಿದ್ದಲ್ಲಿ; (ಸಿ) ತೀರ್ಮಾನದ ಮೇಲೆ ಪರಿಣಾಮ ಬೀರುವ ಸಂಗತಿಯ ನಿರ್ಣಯವು ಸಾಕ್ಷ್ಯವನ್ನು ಆಧರಿಸದಿದ್ದಲ್ಲಿ; (ಡಿ) ಪಕ್ಷಕಾರರ ಮುಖ್ಯ ಸಾಕ್ಷ್ಯವನ್ನು ಪರಿಗಣಿಸದಿದ್ದಲ್ಲಿ; ಮತ್ತು (ಇ) ನ್ಯಾಯಿಕ ವಿವೇಚನೆಯನ್ನು ಮನಬಂದಂತೆ ಅಥವಾ ತಪ್ಪಾಗಿ ಚಲಾಯಿಸಿದ್ದಲ್ಲಿ, ಹಸ್ತಕ್ಷೇಪವನ್ನು ಸಮರ್ಥಿಸಿಕೊಳ್ಳಬಹುದಾಗಿದೆಯೆಂದು ತಿಳಿಸಬಹುದು. ಅಂಥ ಸನ್ನಿವೇಶಗಳ ಅಡಿಯಲ್ಲಿ, ಉಚ್ಚ ನ್ಯಾಯಾಲಯ ಅಥವಾ ಪುನರ್ ಪರಿಶೀಲನಾ ನ್ಯಾಯಾಲಯವು ತನ್ನ ಪುನರ್ ಪರಿಶೀಲನಾ ಅಧಿಕಾರಗಳನ್ನು ಚಲಾಯಿಸಬಹುದು. ಸಾಮಾನ್ಯವಾಗಿ, ಸಂಗತಿಯ ಸಮವರ್ತಿ ನಿರ್ಣಯವು ಅದೇ ಸನ್ನಿವೇಶಗಳ ಮತ್ತು ಸಂಗತಿಗಳ ಗುಚ್ಛಗಳ ಮೇಲೆ ಪರ್ಯಾಯ ದೃಷ್ಟಿಕೋನವು ಸಾಧ್ಯವಿದ್ದರೂ ಸಹ ಸಂಗತಿಯ ನಿರ್ಣಯದಲ್ಲಿ ನ್ಯಾಯಾಲಯವು ಹಸ್ತಕ್ಷೇಪ ಮಾಡತಕ್ಕದ್ದಲ್ಲ. ಆದರೆ, ಮೇಲೆ ಗುರುತು ಮಾಡಲಾದ ಪ್ರವರ್ಗಗಳ ಅಡಿಯಲ್ಲಿ ಅದು ಬಂದಿದ್ದರೆ ಮತ್ತು ಸ್ವಭಾವ ಸಿದ್ಧ ನ್ಯಾಯದ ತತ್ವಗಳನ್ನು ಒಟ್ಟಾರೆ ಉಲ್ಲಂಘಿಸಲು ಅದು ಕಾರಣವಾಗಿದ್ದರೆ, ಅಂಥ ಸನ್ನಿವೇಶಗಳ ಅಡಿಯಲ್ಲಿ ಸ್ವಭಾವಸಿದ್ಧ ನ್ಯಾಯದ ವಿಫಲತೆಯಾಗಿರುವುದು ಕಂಡು ಬಂದಿದ್ದರೆ, ಪುನರ್ ಪರಿಶೀಲನಾ ನ್ಯಾಯಾಲಯವು, ಗಣನೀಯ ಹೆಚ್ಚಿನ ನ್ಯಾಯದ ಸಲುವಾಗಿ ಸಾಕ್ಷ್ಯವನ್ನು ಮೌಲ್ಯಮಾಪನ ಮಾಡಲು ಮುಂದಾಗಬಹುದು.

ಭಾರತೀಯ ಸಾಕ್ಷ್ಯ ಅಧಿನಿಯಮದ 73ನೇ ಪ್ರಕರಣದ ಮೇರೆಗಿನ ಅಧಿಕಾರವನ್ನು ದಂಡಾಧಿಕಾರಿಯವರು ಚಲಾಯಿಸಬಹುದು. ಭಾರತೀಯ ಸಾಕ್ಷ್ಯ ಅಧಿನಿಯಮದ 73ನೇ ಪ್ರಕರಣವನ್ನು ಸಾಮಾನ್ಯವಾಗಿ ಮತ್ತು ಸಾಧಾರಣವಾಗಿ, ನ್ಯಾಯಾಲಯವು

ತಜ್ಞರು ನೀಡಿದ ಅಭಿಪ್ರಾಯದ ಸತ್ಯಾಸತ್ಯತೆಯನ್ನು ಪರೀಕ್ಷಿಸಲು ಅಥವಾ ಪ್ರಕ್ರಿಯಾತ್ಮಕ ಕಾನೂನುಗಳ ಮೇರೆಗೆ ನಮೂದಿಸಲಾದ ಯಾವುದೇ ವಿಧಾನದ ಮೂಲಕ ಮುಖ್ಯಾಂಶಗಳನ್ನು ಮಂಡಿಸಿದ ಇತರ ಸಾಕ್ಷ್ಯವನ್ನು ಪರಿಶೀಲಿಸಲು ಚಲಾಯಿಸಬಹುದು. ಸಹಿಗಳಲ್ಲಿ ಯಾವುದೇ ವ್ಯತ್ಯಾಸವಿದ್ದರೂ ಕೂಡ, ನ್ಯಾಯಾಲಯವು, ತಜ್ಞರ ಅಭಿಪ್ರಾಯವನ್ನು ದಾಖಲೆಯಲ್ಲಿ ಪಡೆದುಕೊಂಡ ಹೊರತು ಅದನ್ನು ಪರಿಶೀಲಿಸುವ ಧೈರ್ಯ ಮಾಡಬಾರದು. ಆದುದರಿಂದ, ನ್ಯಾಯಾಲಯವು, ಪ್ರತಿಯೊಂದು ಪ್ರಕರಣದ ಸಂಗತಿಗಳು ಮತ್ತು ಸನ್ನಿವೇಶಗಳನ್ನು ನೋಡಿಕೊಂಡು ಎಚ್ಚರಿಕೆಯಿಂದ ಕಾರ್ಯವನ್ನು ಎತ್ತಿಕೊಳ್ಳಬೇಕು ಮತ್ತು ಅಪರೂಪಕ್ಕೆ, ಭಾರತೀಯ ಸಾಕ್ಷ್ಯ ಅಧಿನಿಯಮದ 73ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಬೇಕು. ನೀಡಲಾದ ನಿರ್ದಿಷ್ಟ ಪ್ರಕರಣದಲ್ಲಿ ಆಪಾದಿತನು, ವಿವಾದಿತ ದಸ್ತಾವೇಜಿನಲ್ಲಿರುವ ತನ್ನ ಸಹಿ ಅಥವಾ ಬೆರಳಿನ ಗುರುತನ್ನು ನಿರ್ದಿಷ್ಟವಾಗಿ ಮತ್ತು ಪಟ್ಟುಬಿಡದೆ ನಿರಾಕರಿಸಿದ್ದಾನೆಂಬುದನ್ನು ಮತ್ತು ಅಂಥ ಸಹಿಯ ಪರಿಶೀಲನೆಯು ತಜ್ಞರ ಅಭಿಪ್ರಾಯವನ್ನು ಅಗತ್ಯಪಡಿಸುತ್ತದೆ ಎಂಬುದನ್ನು ರುಜುವಾತುಪಡಿಸಲು ನ್ಯಾಯಾಲಯದ ಮುಂದೆ ಕೆಲವು ಸಾಕ್ಷ್ಯಾಧಾರಗಳನ್ನು ಸಹ ಇಡಬೇಕು ಎಂಬುದನ್ನು ಹೇಳುವಾಗ, ಇದು ಯಾವಾಗಲೂ ಅಪಾಯಕಾರಿ ಮತ್ತು ಹಾನಿಕಾರಕವಾಗಿದೆಯೆಂದು ನಿಸ್ಸಂದೇಹವಾಗಿ ಹೇಳಬಹುದು.

ಆಪಾದಿತನು ಕೋರಿಕೊಂಡಿದ್ದರೂ ಕೂಡ ಇದು ತುಂಬಾ ಸಮಯವನ್ನು ಹಿಡಿಯುತ್ತದೆ ಮತ್ತು ಅಧಿವಿಚಾರಣೆಯಲ್ಲಿ ವಿಳಂಬವಾಗುತ್ತದೆ ಎಂಬ ಕಾರಣದ ಆಧಾರದ ಮೇಲೆ ತಜ್ಞರಿಗೆ ವಿವಾದಿತ ಸಹಿಗಳನ್ನು ನ್ಯಾಯಾಧೀಶರು ಕಳುಹಿಸಿರುವುದಿಲ್ಲ. ಇದಕ್ಕೆ ಆಪಾದಿತನು ಜವಾಬ್ದಾರನಾಗಿರುವುದಿಲ್ಲ. ಅಂಥ ವಿಳಂಬದಿಂದಲೇ, ಸ್ವಭಾವಸಿದ್ಧ ನ್ಯಾಯದ ತತ್ವವನ್ನು ಉಪೇಕ್ಷಿಸಲು ಇದಷ್ಟೇ ಸಾಕಾಗುವುದಿಲ್ಲ.

ಸದರಿ ಸಂಗತಿಗಳು ಮತ್ತು ಸನ್ನಿವೇಶಗಳ ಆಧಾರದ ಮೇಲೆ ನಿರ್ದಿಷ್ಟವಾಗಿ ಈ ಪ್ರಕರಣಕ್ಕೆ ಸಂಬಂಧಪಡುವಷ್ಟರಮಟ್ಟಿಗೆ, ನಿಶಾನೆ ಪಿ.1ರಲ್ಲಿ ಸಹಿಯನ್ನು ಸಂದೇಹಿಸುವ ಸಾಕಷ್ಟು ಸಾಕ್ಷ್ಯಾಧಾರಗಳನ್ನು ಮುಂದಿಟ್ಟಿದ್ದಾಳೆ. ಉದ್ದಕ್ಕೂ ಅಂಥ ಸಂದೇಹವನ್ನು

ವ್ಯಕ್ತಪಡಿಸುವಾಗ ಮತ್ತು ದೂರನ್ನು ಸಲ್ಲಿಸುವ ಮೂಲಕ ತನ್ನನ್ನು ಒಡ್ಡಿಕೊಂಡು ಸಮುಚಿತ ಕ್ರಮವನ್ನು ತೆಗೆದುಕೊಂಡಿರುತ್ತಾರೆ ಮತ್ತು ಆ ಸಂದೇಹವನ್ನು ವ್ಯಕ್ತಪಡಿಸುವ ಪ್ರಾಸಿಕ್ಯೂಷನ್ ಸಾಕ್ಷಿದಾರರ ಸಾಕ್ಷ್ಯ ಮತ್ತು ಒದಗಿಸಿದ ಸಾಕ್ಷ್ಯದ ವ್ಯವಹರಣೆ ನಡೆಯುವ ಅವಧಿಯಲ್ಲಿ ಆ ಪ್ರತಿವಾದವನ್ನು ತೆಗೆದುಕೊಂಡಿದ್ದು, ಅಪೀಲು ನ್ಯಾಯಾಲಯವು, ನಿಶ್ಚಿತವಾಗಿ ಈ ಎಲ್ಲಾ ಆಯಾಮುಗಳನ್ನು ಪರಿಗಣಿಸಿ, ಸದರಿ ಅರ್ಜಿಯನ್ನು ಪುರಸ್ಕರಿಸಲೇಬೇಕಾಗುತ್ತದೆ. ಮೊದಲ ಅಪೀಲು ನ್ಯಾಯಾಲಯವು, ಮೇಲಿನ ಎಲ್ಲಾ ಮುಖ್ಯ ಸಂಗತಿಗಳನ್ನು ಪರಿಗಣಿಸದೆ ಮತ್ತು ಕ್ರಿಮಿನಲ್ ಪ್ರಕರಣದಲ್ಲಿ ತನ್ನನ್ನು ಸಮರ್ಥಿಸಿಕೊಳ್ಳಲು ಆಪಾದಿತಳಿಗೆ ಸಂಪೂರ್ಣ ಅವಕಾಶವನ್ನು ನೀಡುವ ಮೂಲಕ ಸ್ವಭಾವ ಸಿದ್ಧ ನ್ಯಾಯದ ತತ್ವಗಳಿಗೂ ಕೂಡ ಅಂಟಿಕೊಳ್ಳದೆ, ಭಾರತೀಯ ಸಾಕ್ಷ್ಯ ಅಧಿನಿಯಮದ 45ನೇ ಪ್ರಕರಣದ ಮೇರೆಗೆ ಅರ್ಜಿಯನ್ನು ವಜಾಗೊಳಿಸಿ ಗಂಭೀರ ಲೋಪವೆಸಗಿದೆಯೆಂಬುದು ನನ್ನ ಅಭಿಪ್ರಾಯವಾಗಿದೆ. ಹೀಗಾಗಿ, ಅಧಿವಿಚಾರಣಾ ನ್ಯಾಯಾಲಯ ಹಾಗೂ ಮೊದಲ ಅಪೀಲು ನ್ಯಾಯಾಲಯದ ತೀರ್ಪನ್ನು ತಳ್ಳಿ ಹಾಕುವುದಕ್ಕೆ ಅರ್ಹವಾಗಿವೆ. ಆಪಾದಿತಳು, ವ್ಯವಹರಣೆಗಳನ್ನು ಲಂಬಿಸಲು ನ್ಯಾಯಾಲಯದ ವಿವೇಚನೆಯನ್ನು ಉದ್ದೇಶಪೂರ್ವಕವಾಗಿ ದುರ್ಬಳಕೆ ಮಾಡಿಕೊಂಡಿರುವಳು ಎಂದು ನ್ಯಾಯಾಲಯವು ಅಭಿಪ್ರಾಯಪಟ್ಟರೆ ಎರಡೂ ಪಕ್ಷಕಾರರಿಗೆ ಸಂಪೂರ್ಣ ಅವಕಾಶವನ್ನು ನೀಡುವುದಕ್ಕೆ ಅಧಿವಿಚಾರಣಾ ನ್ಯಾಯಾಲಯವೂ ಸಹ ಮುಕ್ತವಾಗಿರುತ್ತದೆ ಎಂದು ಅಭಿಪ್ರಾಯಪಟ್ಟು ಸದರಿ ಕ್ರಿಮಿನಲ್ ಪುನರೀಕ್ಷಣಾ ಅರ್ಜಿಯನ್ನು ಪುರಸ್ಕರಿಸಲಾಗಿದೆ.

| *ಉಲ್ಲೇಖಿಸಲಾದ ಮೊಕದ್ದಮೆಗಳು:* | *ಪ್ಯಾರಾಗಳಲ್ಲಿ* |
|---|---|
| *1. (2007) 2 ಎಸ್‌ಸಿಸಿ 258<br>ಕಲ್ಯಾಣಿ ಭಾಸ್ಕರ್ (ಶ್ರೀಮತಿ) –ವಿರುದ್ಧ–<br>ಎಂ.ಎಸ್. ಸಂಪೂರ್ಣಂ (ಶ್ರೀಮತಿ)* | *(ಉಲ್ಲೇ) 16* |

2. *ಎಐಆರ್ 2012 ಎಸ್‌ಸಿಡಬ್ಲ್ಯೂ 5492*
*ಅಜಯ್ ಕುಮಾರ್ ಪರ್ಮಾರ್ -ವಿರುದ್ಧ-*
*ರಾಜಸ್ಥಾನ ರಾಜ್ಯ* *(ಉಲ್ಲೇ) 16(ಎ)*

3. *(2008) 5 ಎಸ್‌ಸಿಸಿ 633*
*ಟಿ. ನಾಗಪ್ಪ -ವಿರುದ್ಧ- ವೈ.ಆರ್. ಮುರಳಿಧರ್* *(ಉಲ್ಲೇ) 16(ಬಿ)*

4. *ಐಎಲ್‌ಆರ್ 2007 ಕೆಎಆರ್ 247*
*ಎಸ್.ಬಿ. ಇಟ್ಟಿಗಿ ಮತ್ತು ಇನ್ನೊಬ್ಬರು -ವಿರುದ್ಧ-*
*ಎಸ್.ವಿ. ಸುಲೋಚನಾ ಮತ್ತು ಇತರರು* *(ಉಲ್ಲೇ) 18*

5. *ಐಎಲ್‌ಆರ್ 2007 ಕೆಎಆರ್ 936*
*ಎಚ್.ಎಂ. ಸತೀಶ್ -ವಿರುದ್ಧ-*
*ಬಿ.ಎನ್. ಅಶೋಕ್* *(ಉಲ್ಲೇ) 18(ಎ)*

6. *ಎಲ್‌ಎಡಬ್ಲ್ಯೂಎಸ್(ಕೆಎಆರ್)-2014-4-141*
*ಎನ್. ಮುನಿಸ್ವಾಮಿ ರೆಡ್ಡಿ -ವಿರುದ್ಧ-*
*ಎಂ. ನಾರಾಯಣಸ್ವಾಮಿ* *(ಉಲ್ಲೇ) 18(ಬಿ)*

7. *ಎಐಆರ್ 2008 ಎಸ್‌ಸಿ 1541*
*ತಿರುವೆಂಗಡ ಪಿಳ್ಳೆ -ವಿರುದ್ಧ-*
*ನವನೀತಮ್ಮಾಳ್ ಮತ್ತು ಇನ್ನೊಬ್ಬರು* *(ಉಲ್ಲೇ) 28*

ಅರ್ಜಿದಾರರ ಪರ : ಶ್ರೀ ಕೇಶವಮೂರ್ತಿ ಸಿ.ಎನ್, ವಕೀಲರು;
ಪ್ರತ್ಯರ್ಜಿದಾರರ ಪರ : ಶ್ರೀ ಆರ್.ಬಿ. ಸದಾಶಿವಪ್ಪ, ವಕೀಲರು ಇವರ ಪರವಾಗಿ
ಶ್ರೀ ಜಿ.ಬಿ. ನಂದೀಶ್ ಗೌಡ, ವಕೀಲರು.

## ಆಜ್ಞೆ

**ನ್ಯಾಯಮೂರ್ತಿ ಕೆ.ಎನ್. ಫಣೀಂದ್ರ:**

ಪುನರ್ ಪರಿಶೀಲನಾ ಅರ್ಜಿದಾರರು ವರ್ಗಾವಣೀಯ ಲಿಖಿತ ಅಧಿನಿಯಮದ 138ನೇ ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧಕ್ಕಾಗಿ ಮತ್ತು ಆರು ತಿಂಗಳ ಅವಧಿಗೆ ಸಾದಾ ಕಾರಾವಾಸ ಶಿಕ್ಷೆಯನ್ನು ವಿಧಿಸಿದ್ದಕ್ಕಾಗಿ ಮತ್ತು ಒಂದು ತಿಂಗಳ ಅವಧಿಯವರೆಗಿನ ಸಾದಾ ಕಾರಾವಾಸಕ್ಕೆ ಒಳಗಾಗಿದ್ದ ಕಲಂನ್ನು ತಪ್ಪುವ ಮೂಲಕ 1,60,000/– ರೂ.ಗಳ ಜುಲ್ಮಾನೆಯನ್ನು ಸಹ ವಿಧಿಸಿದ ಮತ್ತು ಜುಲ್ಮಾನೆಯ ಮೊತ್ತವಲ್ಲದೆ ದೂರುದಾರನಿಗೆ ನಷ್ಟ ಪರಿಹಾರವೆಂದು ಸಂದಾಯ ಮಾಡಬೇಕಾದ 1,50,000/– ರೂ. ಮೊತ್ತವನ್ನು ಸಹ ನೀಡುವುದಕ್ಕೆ ಸಂಬಂಧಿಸಿದಂತೆ ದಿನಾಂಕ 25.8.2012 ರಂದು ಸಿಸಿ ಸಂ.439/2008ರಲ್ಲಿ ಜೆಎಂಎಫ್‌ಸಿ, ಗುಬ್ಬಿ ಇವರು ಹೊರಡಿಸಿದ ತೀರ್ಪನ್ನು ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು ತುಮಕೂರು ಇವರು ಹೊರಡಿಸಿದ ದಿನಾಂಕ 20.11.2015ರ ಕ್ರಿಮಿನಲ್ ಅಪೀಲು ಸಂ.124/2012ರಲ್ಲಿ ಇದನ್ನು ದೃಢಪಡಿಸಿದ ತೀರ್ಪನ್ನು ವಜಾಗೊಳಿಸಲು ಕೋರಿ ಈ ಪುನರ್ ಪರಿಶೀಲನಾ ಅರ್ಜಿಯನ್ನು ಹೂಡಿದ್ದಾರೆ.

2. ಅಧಿವಿಚಾರಣಾ ನ್ಯಾಯಾಲಯ ಮತ್ತು ಮೊದಲ ಅಪೀಲು ನ್ಯಾಯಾಲಯವು ಯುಕ್ತ ದೃಷ್ಟಿಕೋನದಲ್ಲಿ ಪಕ್ಷಕಾರರು ಒದಗಿಸಿದ ಸಾಕ್ಷ್ಯವನ್ನು ಪರಿಗಣನೆಗೆ ತೆಗೆದುಕೊಂಡಿಲ್ಲವೆನ್ನುವ ಆಧಾರವನ್ನು ಆಪಾದಿತಳಾಗಿರುವ ಅರ್ಜಿದಾರಳು ತೆಗೆದುಕೊಂಡಿದ್ದಾಳೆ. ಅಧಿವಿಚಾರಣಾ ನ್ಯಾಯಾಲಯವು ಸಾಕ್ಷ್ಯವನ್ನು ಮೌಲ್ಯಮಾಪನ ಮಾಡದಿರುವಲ್ಲಿ ಗಂಭೀರ ಲೋಪವೆಸಗಿದೆ ಮತ್ತು ದೂರುದಾರನು ವರ್ಗಾವಣೀಯ ಲಿಖಿತ ಅಧಿನಿಯಮ, 1881ರ 138ನೇ ಪ್ರಕರಣದ ಅಂಶಗಳನ್ನು ರುಜುವಾತುಪಡಿಸಲು ವಿಫಲನಾಗಿರುವನೆಂದು ಅಭಿಪ್ರಾಯಪಡುವಲ್ಲಿ ವಿಫಲವಾಗಿದೆ. ಆಪಾದಿತಳು, ವರ್ಗಾವಣೀಯ ಲಿಖಿತ ಅಧಿನಿಯಮ, 1881ರ 138ನೇ ಪ್ರಕರಣದ ಮೇರೆಗೆ ಹೊರಡಿಸಲು ಅಗತ್ಯಪಡಿಸಲಾದಂತೆ ನೋಟೀಸನ್ನು ಹೊರಡಿಸದಿರುವುದನ್ನು ಉದ್ದಕ್ಕೂ

ನಿರಾಕರಿಸಿರುವಳು ಎಂದು ವಾದಿಸಲಾಗಿದೆ. ಎರಡನೆಯದಾಗಿ, ನಿಶಾನೆ ಪಿ.1ರ ಮೂಲಕ ದೂರುದಾರನು ಹಾಜರುಪಡಿಸಿದ ಚೆಕ್ಕಿನಲ್ಲಿ ಕಂಡುಬಂದಿರುವ ಸಹಿಯು ಆಪಾದಿತಳದಲ್ಲವೆನ್ನುವ ನಿರ್ದಿಷ್ಟ ವಾದವನ್ನು ಅವಳು ತೆಗೆದುಕೊಂಡಿದ್ದಾಳೆ. ಅರ್ಜಿದಾರಳು, ಕೈ ಬರವಣಿಗೆ ತಜ್ಞರ ಅಭಿಪ್ರಾಯಕ್ಕಾಗಿ ಸದರಿ ಚೆಕ್ಕನ್ನು ಕಳುಹಿಸಬೇಕೆಂದು ಕೋರಿ ಮೊದಲ ಅಪೀಲು ನ್ಯಾಯಾಲಯದ ಮುಂದೆ, ಭಾರತೀಯ ಸಾಕ್ಷ್ಯ ಅಧಿನಿಯಮದ 45ನೇ ಪ್ರಕರಣದ ಮೇರೆಗೆ ಅರ್ಜಿಯನ್ನು ಸಲ್ಲಿಸಿರುವನೆಂದು ಮುಂದುವರೆದು ವಾದಿಸಿದ್ದಾರೆ. ಆದರೆ, ಮೊದಲ ಅಪೀಲು ನ್ಯಾಯಾಲಯವು ಸದರಿ ಅರ್ಜಿಯನ್ನು ಪರಿಗಣಿಸುವುದನ್ನು ತಿರಸ್ಕರಿಸಿ, ಅದನ್ನು ದೋಷಯುಕ್ತವಾಗಿ ತಿರಸ್ಕರಿಸಿತ್ತು. ಅಧಿವಿಚಾರಣಾ ನ್ಯಾಯಾಲಯ ಮತ್ತು ಮೊದಲ ಅಪೀಲು ನ್ಯಾಯಾಲಯವು ತಜ್ಞರ ಸಹಾಯ ಪಡೆದುಕೊಳ್ಳದೆ, ವಕಾಲತ್‌ನಲ್ಲಿ ಚೆಕ್‌ನಲ್ಲಿರುವ ಸಹಿಗಳನ್ನು, ಆಪಾದಿತಳ ಇತರ ಒಪ್ಪಿತ ಸಹಿಗಳೊಂದಿಗೆ ಹೋಲಿಸಿದ್ದಾರೆ ಮತ್ತು ದಂಡ ಪ್ರಕ್ರಿಯಾ ಸಂಹಿತೆಯ 313ನೇ ಪ್ರಕರಣದ ಅಡಿಯಲ್ಲಿ ದಾಖಲಿಸಲಾದ ಆಪಾದಿತಳ ಹೇಳಿಕೆಯನ್ನು ಹೋಲಿಸಿದ್ದು, ದೂರುದಾರನು, ತನ್ನ ವಾದವನ್ನು ನಿರ್ದಿಷ್ಟವಾಗಿ ನಿಶಾನೆ ಪಿ.1(ಎ) ನಲ್ಲಿರುವ ಸಹಿಯು ಆಪಾದಿತಳದಾಗಿದೆಯೆಂಬುದನ್ನು ರುಜುವಾತುಪಡಿಸಿದ್ದಾಳೆಂಬ ನಿರ್ಣಯಕ್ಕೆ ಬಂದಿರುತ್ತವೆ. ಆಪಾದಿತನಿಗೆ ತನ್ನ ವಾದವನ್ನು ರುಜುವಾತು ಪಡಿಸಲು ಅವಕಾಶವನ್ನು ನೀಡದಿರುವುದರಿಂದ ಸದರಿ ನಿರ್ಣಯವು ಸ್ವಭಾವ ಸಿದ್ದ ನ್ಯಾಯದ ತತ್ವಗಳಿಗೆ ವಿರುದ್ಧವಾಗಿದೆ. ಎರಡೂ ನ್ಯಾಯಾಲಯಗಳು, ಆಪಾದಿತಳು, ಅವಳು ತೆಗೆದುಕೊಂಡ ಪ್ರತಿವಾದವನ್ನು ರುಜುವಾತುಪಡಿಸಲು ಯಾವುದೇ ಕ್ರಮಗಳನ್ನು ಕೈಗೊಂಡಿಲ್ಲವೆಂದು ತಪ್ಪಾಗಿ ಅಭಿಪ್ರಾಯಪಟ್ಟಿವೆ. ಆದುದರಿಂದ, ಈ ಎಲ್ಲಾ ಕಾರಣಗಳಿಗಾಗಿ, ಅರ್ಜಿದಾರರ ವಕೀಲರು, ಸದರಿ ವಾದಗಳನ್ನು ಬೆಂಬಲಿಸಿ ನ್ಯಾಯಾಲಯದ ಮುಂದೆ ವಾದಿಸಿರುವರು ಮತ್ತು ಪುನರ್ ಪರಿಶೀಲನಾ ಅರ್ಜಿಯನ್ನು ಪುರಸ್ಕರಿಸಬೇಕೆಂದು ಮತ್ತು ಆಪಾದಿತ/ ಅರ್ಜಿದಾರರು ಖುಲಾಸೆಗೊಳಿಸಲು ಹಕ್ಕುಳ್ಳವರಾಗಿರುವರೆಂದು ನಿವೇದಿಸಿದ್ದಾರೆ. ಆದುದರಿಂದ, ಅವರು ಅಧಿವಿಚಾರಣಾ ನ್ಯಾಯಾಲಯವು ಹೊರಡಿಸಿದ ಮತ್ತು ಅಪೀಲು ನ್ಯಾಯಾಲಯವು ದೃಢಪಡಿಸಲಾದಂಥ ತೀರ್ಪನ್ನು ವಜಾಗೊಳಿಸಲು ಕೋರಿಕೊಂಡಿದ್ದಾರೆ. ಪರ್ಯಾಯವಾಗಿ, ಅವರು, ಅಪೀಲು ನ್ಯಾಯಾಲಯದ ಮುಂದೆ

ಭಾರತೀಯ ಸಾಕ್ಷ್ಯ ಅಧಿನಿಯಮದ 45ನೇ ಪ್ರಕರಣದ ಮೇರೆಗೆ ಅರ್ಜಿದಾರಳು ಸಲ್ಲಿಸಿದ ಅರ್ಜಿಯನ್ನು ಪುರಸ್ಕರಿಸಬಹುದಾಗಿದೆಯೆಂದು ಮತ್ತು ಯುಕ್ತ ನಿರ್ದೇಶನಗಳೊಂದಿಗೆ ಹೊಸ ವಿಲೇವಾರಿಗಾಗಿ ಅಧಿವಿಚಾರಣಾ ನ್ಯಾಯಾಲಯಕ್ಕೆ ವಿಷಯವನ್ನು ಕಳುಹಿಸಬಹುದಾಗಿದೆಯೆಂದು ಸಹ ವಾದಿಸಿದ್ದಾರೆ.

3. ಇದಕ್ಕೆ ವಿರುದ್ಧವಾಗಿ, ಎದುರುದಾರ–ದೂರುದಾರನ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು, ದೂರುದಾರರು ದೂರಿನಲ್ಲಿರುವ ವಾಸ್ತವಿಕ ಸಂಗತಿಗಳನ್ನು ವಿವರಿಸುವುದಷ್ಟೇ ಅಲ್ಲ ವಾದವನ್ನು ರುಜುವಾತುಪಡಿಸಿರುವರೆಂದು, ನ್ಯಾಯಾಲಯದ ಮುಂದೆ ಸಮರ್ಪಕ ಮತ್ತು ಮನವೊಪ್ಪುವ ಸಾಕ್ಷ್ಯವನ್ನು ಹಾಜರುಪಡಿಸುವ ಮೂಲಕ ಸಹ ಅದನ್ನು ರುಜುವಾತು ಪಡಿಸಿರುವರೆಂದು ಪಟ್ಟು ಬಿಡದೆ ವಾದಿಸಿದ್ದಾರೆ. ಅವಳು ಅಧಿವಿಚಾರಣಾ ನ್ಯಾಯಾಲಯದ ಮುಂದೆ ಭಾರತೀಯ ಸಾಕ್ಷ್ಯ ಅಧಿನಿಯಮದ 45ನೇ ಪ್ರಕರಣದ ಮೇರೆಗೆ ಅಂಥ ಯಾವುದೇ ಅರ್ಜಿಯನ್ನು ಸಲ್ಲಿಸಿಲ್ಲವಾದ್ದರಿಂದ ಅಥವಾ ಸದರಿ ಸಹಿಯು ಆಪಾದಿತರದಲ್ಲವೆಂದು ತೋರಿಸಲು ಯಾವುದೇ ಸಾಕ್ಷ್ಯಾಧಾರವನ್ನು ಸಲ್ಲಿಸದಿರುವುದರಿಂದ ಆಪಾದಿತಳ ಕಡೆಯಿಂದ ಲೋಪವಾಗಿದೆ. ದೂರುದಾರನ ಸಾಕ್ಷ್ಯ ಮತ್ತು ಬ್ಯಾಂಕು ವ್ಯವಸ್ಥಾಪಕರಾದ ಪ್ರಾಸಾ.2, ಇವರು ನಿಶಾನೆ ಪಿ.1(ಎ) ನಲ್ಲಿರುವ ಸದರಿ ಸಹಿಯು ಆಪಾದಿತಳಿಗೆ ಸೇರಿರುತ್ತದೆಂಬುದನ್ನು ವಿಶದೀಕರಿಸಿ, ಸಂಭಾವ್ಯತೆಯನ್ನು ತಿಳಿಸಿದ್ದಾರೆ. ಆದುದರಿಂದ, ಅಧಿವಿಚಾರಣಾ ನ್ಯಾಯಾಲಯ ಹಾಗೂ ಮೊದಲ ಅಪೀಲು ನ್ಯಾಯಾಲಯವು, ದಾಖಲೆಯಲ್ಲಿರುವ ಸಾಕ್ಷ್ಯವನ್ನು ಮೌಲ್ಯಮಾಪನ ಮಾಡುವಲ್ಲಿ ಯಾವುದೇ ಲೋಪವೆಸಗಿರುವುದಿಲ್ಲ. ಆಪಾದಿತಳಿಗೆ ಹೊರಡಿಸಲಾದ ನೋಟೀಸ್‌ನ್ನು ಸಹ ಆಪಾದಿತನ ಮೇಲೆ ಜಾರಿಗೊಳಿಸಲಾಗಿದೆಯೆಂದು ಭಾವಿಸಲಾಗಿತ್ತು. ಹೀಗಾಗಿ ಅಧಿವಿಚಾರಣಾ ನ್ಯಾಯಾಲಯವು, ಈ ದೃಷ್ಟಿಕೋನದಲ್ಲಿ ಯುಕ್ತವಾಗಿ ಮೌಲ್ಯಮಾಪನ ಮಾಡಿರುತ್ತದೆ. ಆದುದರಿಂದ, ಅಪರಾಧ ನಿರ್ಣಯದ ತೀರ್ಪಿನಲ್ಲಿ ಮತ್ತು ಮೊದಲ ಅಪೀಲು ನ್ಯಾಯಾಲಯವು ದೃಢಪಡಿಸಿದಂತೆ ಅಧಿವಿಚಾರಣಾ ನ್ಯಾಯಾಲಯವು ಹೊರಡಿಸಿದ ಶಿಕ್ಷೆಯಲ್ಲಿ ಹಸ್ತಕ್ಷೇಪ ಮಾಡುವುದಕ್ಕೆ ಈ ನ್ಯಾಯಾಲಯದ ಮುಂದೆ ಸಲ್ಲಿಸಲು ಯಾವುದೇ ಆಧಾರವಿರುವುದಿಲ್ಲ.

4. ಅರ್ಜಿದಾರಳು ಹಾಗೂ ಎದುರುದಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರುಗಳ ಸುನಾವಣೆ ಮಾಡಿದ ಮೇಲೆ ಮತ್ತು ದಾಖಲೆಯಲ್ಲಿರುವ ಸಂಪೂರ್ಣ ಸಾಕ್ಷ್ಯಾಧಾರಗಳನ್ನು ನೋಡಿದ ತರುವಾಯ, ಈ ನ್ಯಾಯಾಲಯದ ಪರಿಗಣನೆಗಾಗಿ ಈ ವಿವಾದಾಂಶ ಉದ್ಭವಿಸುತ್ತದೆ –

> *"ಅಧಿವಿಚಾರಣಾ ನ್ಯಾಯಾಲಯ ಹಾಗೂ ಅಪೀಲು ನ್ಯಾಯಾಲಯವು ಹೊರಡಿಸಿದ ತೀರ್ಪಿನಲ್ಲಿ ಹಸ್ತಕ್ಷೇಪ ಮಾಡಲು ಯಾವುದೇ ಯುಕ್ತ ಅಥವಾ ಗಣನೀಯ ಕಾರಣವನ್ನು ಅರ್ಜಿದಾರಳು ರೂಪಿಸಿದ್ದಾಳೆಯೇ? – ಎಂಬುದಾಗಿದೆ.*

ಪುನರ್ ಪರಿಶೀಲನಾ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸುವಾಗ ಉಚ್ಛ ನ್ಯಾಯಾಲಯದ ಮತ್ತು ಸೆಷನ್ಸ್ ನ್ಯಾಯಾಲಯದ ಅಧಿಕಾರಗಳನ್ನು ತುಂಬಾ ಸೀಮಿತಗೊಳಿಸಲಾಗಿದೆಯೆಂಬುದರ ಕಾನೂನು ಸ್ಥಾನಮಾನವನ್ನು ನಾವು ಅರಿತವರಾಗಿದ್ದೇವೆ. ಉಚ್ಚ ನ್ಯಾಯಾಲಯಕ್ಕೆ, ಸಾಕ್ಷ್ಯಾಧಾರ ತಪ್ಪಾಗಿದೆಯೆಂದು ಅಥವಾ ಕಾನೂನಿನಲ್ಲಿ ಅಥವಾ ಪ್ರಕ್ರಿಯೆಯಲ್ಲಿ ದೋಷಯುಕ್ತವಾಗಿವೆಯೆಂದು, ಸಾಕ್ಷ್ಯವನ್ನು ತಪ್ಪಾಗಿ ಪರಿಭಾವಿಸಿದೆಯೆಂದು ಅಥವಾ ಸಾಕ್ಷ್ಯವನ್ನು ತಪ್ಪಾಗಿ ಓದಿಕೊಳ್ಳಲಾಗಿದೆಯೆಂದು ಕಂಡು ಬಂದರೆ ನಿಹಿತವಾದ ಅಧಿಕಾರಗಳನ್ನು ಚಲಾಯಿಸಲು ವಿಫಲವಾಗಿರುವುದನ್ನು ಅಥವಾ ಅಧಿಕಾರ ವ್ಯಾಪ್ತಿಯನ್ನು ತಪ್ಪಾಗಿ ಚಲಾಯಿಸಲಾಗಿದೆಯೆಂದು ಕಂಡು ಬಂದರೆ ದಾಖಲೆಯಲ್ಲಿರುವ ಸಾಕ್ಷ್ಯಾಧಾರಗಳನ್ನು ಪರಿಗಣಿಸಿ ದಂಡ ಪ್ರಕ್ರಿಯಾ ಸಂಹಿತೆಯ 397 ಅಥವಾ 401ನೇ ಪ್ರಕರಣಗಳ ಮೇರೆಗೆ ತನ್ನ ಅಧಿಕಾರವನ್ನು ಉಚ್ಚ ನ್ಯಾಯಾಲಯವು ಚಲಾಯಿಸಬಹುದು. ವಿಸ್ತೃತ ಪ್ರತಿಪಾದನೆಯಾಗಿರುವ ಕಾರಣದಿಂದ, (ಎ) ನಿರ್ಣಯವು, ಒಟ್ಟಾರೆಯಾಗಿ ತಪ್ಪಾಗಿದ್ದಲ್ಲಿ; (ಬಿ) ಕಾನೂನಿನ ಉಪಬಂಧಗಳಿಗೆ ಅನುಸಾರವಾಗಿರದಿದ್ದಲ್ಲಿ; (ಸಿ) ತೀರ್ಮಾನದ ಮೇಲೆ ಪರಿಣಾಮ ಬೀರುವ ಸಂಗತಿಯ ನಿರ್ಣಯವು ಸಾಕ್ಷ್ಯವನ್ನು ಆಧರಿಸದಿದ್ದಲ್ಲಿ; (ಡಿ) ಪಕ್ಷಕಾರರ ಮುಖ್ಯ ಸಾಕ್ಷ್ಯವನ್ನು ಪರಿಗಣಿಸದಿದ್ದಲ್ಲಿ; ಮತ್ತು (ಇ) ನ್ಯಾಯಿಕ ವಿವೇಚನೆಯನ್ನು ಮನಬಂದಂತೆ ಅಥವಾ ತಪ್ಪಾಗಿ ಚಲಾಯಿಸಿದ್ದಲ್ಲಿ,

ಹಸ್ತಕ್ಷೇಪವನ್ನು ಸಮರ್ಥಿಸಿಕೊಳ್ಳಬಹುದಾಗಿದೆಯೆಂದು ತಿಳಿಸಬಹುದು. ಅಂಥ ಸನ್ನಿವೇಶಗಳ ಅಡಿಯಲ್ಲಿ, ಉಚ್ಚ ನ್ಯಾಯಾಲಯ ಅಥವಾ ಪುನರ್ ಪರಿಶೀಲನಾ ನ್ಯಾಯಾಲಯವು ತನ್ನ ಪುನರ್ ಪರಿಶೀಲನಾ ಅಧಿಕಾರಗಳನ್ನು ಚಲಾಯಿಸಬಹುದು. ಸಾಮಾನ್ಯವಾಗಿ, ಸಂಗತಿಯ ಸಮವರ್ತಿ ನಿರ್ಣಯವು ಅದೇ ಸನ್ನಿವೇಶಗಳ ಮತ್ತು ಸಂಗತಿಗಳ ಗುಚ್ಛಗಳ ಮೇಲೆ ಪರ್ಯಾಯ ದೃಷ್ಟಿಕೋನವು ಸಾಧ್ಯವಿದ್ದರೂ ಸಹ ಸಂಗತಿಯ ನಿರ್ಣಯದಲ್ಲಿ ನ್ಯಾಯಾಲಯವು ಹಸ್ತಕ್ಷೇಪ ಮಾಡತಕ್ಕದ್ದಲ್ಲ. ಆದರೆ, ಮೇಲೆ ಗುರುತು ಮಾಡಲಾದ ಪ್ರವರ್ಗಗಳ ಅಡಿಯಲ್ಲಿ ಅದು ಬಂದಿದ್ದರೆ ಮತ್ತು ಸ್ವಭಾವ ಸಿದ್ಧ ನ್ಯಾಯದ ತತ್ವಗಳನ್ನು ಒಟ್ಟಾರೆ ಉಲ್ಲಂಘಿಸಲು ಅದು ಕಾರಣವಾಗಿದ್ದರೆ, ಅಂಥ ಸನ್ನಿವೇಶಗಳ ಅಡಿಯಲ್ಲಿ ಸ್ವಭಾವಸಿದ್ಧ ನ್ಯಾಯದ ವಿಫಲತೆಯಾಗಿರುವುದು ಕಂಡು ಬಂದಿದ್ದರೆ, ಪುನರ್ ಪರಿಶೀಲನಾ ನ್ಯಾಯಾಲಯವು, ಗಣನೀಯ ಹೆಚ್ಚಿನ ನ್ಯಾಯದ ಸಲುವಾಗಿ ಸಾಕ್ಷ್ಯವನ್ನು ಮೌಲ್ಯಮಾಪನ ಮಾಡಲು ಮುಂದಾಗಬಹುದು. ಮೇಲೆ ಹೇಳಲಾದ ಸದರಿ ತತ್ವಗಳನ್ನು ಮನಸ್ಸಿನಲ್ಲಿಟ್ಟುಕೊಂಡು ನ್ಯಾಯಾಲಯವು, ಪುನರ್ ಪರಿಶೀಲನಾ ಅಧಿಕಾರ ವ್ಯಾಪ್ತಿಯ ಅಡಿಯಲ್ಲಿ ಅಧಿಕಾರಗಳನ್ನು ಚಲಾಯಿಸುವ ಮೊದಲು ದಾಖಲೆಯಲ್ಲಿರುವ ಸಾಕ್ಷ್ಯಾಧಾರಗಳನ್ನು ಎಚ್ಚರಿಕೆಯಿಂದ ಪರಿಶೀಲಿಸಬಹುದು.

5. ಈ ನ್ಯಾಯಾಲಯದ ಮುಂದೆ ಮಂಡಿಸಲಾದ ಆಧಾರಗಳನ್ನು ಪ್ರಸ್ತಾವಿಸುವ ಮೊದಲು ಸಂಕ್ಷಿಪ್ತ ವಾಸ್ತವಿಕ ದೃಷ್ಟಿಕೋನಗಳನ್ನು ತಳೆಯುವುದು ಈ ನ್ಯಾಯಾಲಯಕ್ಕೆ ನ್ಯಾಯ ಸಮ್ಮತವಾದುದು ಮತ್ತು ಅಗತ್ಯವಾದುದಾಗಿದೆ.

ದೂರುದಾರ ಹಾಗೂ ಆಪಾದಿತಳು ಹತ್ತಿರದ ಸಂಬಂಧಿಕರು ಎಂಬುದು ದೂರುದಾರನ ವಾದವಾಗಿದೆ. ಈ ಸಂದರ್ಭದಲ್ಲಿ ಆಪಾದಿತಳು ಗುಬ್ಬಿಯಲ್ಲಿ 1.3.2008 ರಂದು ಅವಳ ಅನಾನುಕೂಲತೆಯ ಮತ್ತು ತುರ್ತಿನ ಕಾರಣದಿಂದ ದೂರುದಾರನನ್ನು ಸಂಪರ್ಕಿಸಿದ್ದು, ತಕ್ಷಣದ ಕೌಟುಂಬಿಕ ಅವಶ್ಯಕತೆಗಳಿಗಾಗಿ ಆರ್ಥಿಕ ನೆರವಿನ ಸಂಬಂಧ ಅವರನ್ನು ಕೋರಿಕೊಂಡಿದ್ದಾರೆ. ಆಪಾದಿತರ ಸಂಬಂಧವನ್ನು ಮತ್ತು ಕಾಠಿಣ್ಯ ಪರಿಸ್ಥಿತಿಗಳನ್ನು ಪರಿಗಣಿಸಿ, ದೂರುದಾರನು, ನಗದು ರೂಪದಲ್ಲಿ

50,000/- ಸಾವಿರ ರೂಪಾಯಿಗಳ ಮೊತ್ತವನ್ನು ಮುಂಗಡವಾಗಿ ನೀಡಿದ್ದು, ಕರ್ನಾಟಕ ಬ್ಯಾಂಕು ನಿಯಮಿತದಲ್ಲಿ ಪಡೆದ ದಿನಾಂಕ 7.3.2008ರ ಸಂ.835025ನ್ನು ಹೊಂದಿರುವ ಡಿಡಿ ಮೂಲಕ 1,00,000/- ರೂಪಾಯಿಗಳನ್ನು ನೀಡಿದ್ದು, ಆಪಾದಿತರು ನಗದು ರೂಪಕ್ಕೆ ಬದಲಾಯಿಸಿಕೊಂಡಿದ್ದಾಳೆ. ಕೋರಿಕೆಯಂತೆ, ಆಪಾದಿತಳು, ದೂರುದಾರನಿಗೆ ಅದನ್ನು ಮರುಪಾವತಿಸಲು ಒಪ್ಪಿದ್ದಾಳೆ. ಸದರಿ ಮೊತ್ತವನ್ನು ಯುಕ್ತವಾಗಿ ನೀಡುವುದಕ್ಕಾಗಿ, ಆಪಾದಿತಳು, 'ಗೋವಾ ರಾಜ್ಯ ಸಹಕಾರಿ ಬ್ಯಾಂಕು ನಿಯಮಿತ, ಬಿಚೊಲಿಮ್ ವಿಭಾಗ, ಗೋವಾ ಇಲ್ಲಿ ಪಡೆದ 1,50,000/- ರೂ.ಗಳ ದಿನಾಂಕ 4.6.2008ರ 1459653ರ ಸಂಖ್ಯೆಯನ್ನು ಹೊಂದಿರುವ ಚೆಕ್‌ನ್ನು ನೀಡಿದ್ದಾಳೆ. ಆಪಾದಿತಳ ಮೇಲೆ ವಿಶ್ವಾಸವಿಟ್ಟುಕೊಂಡು ದೂರುದಾರನು, ದಿನಾಂಕ 4.6.2008 ರಂದು ಗುಬ್ಬಿಯಲ್ಲಿರುವ ತನ್ನ ಉಳಿತಾಯ ಬ್ಯಾಂಕ್ ಖಾತೆಯ ಮೂಲಕ ಚೆಕ್ಕನ್ನು ಸಲ್ಲಿಸಿದ್ದಾಳೆ. ಆದರೆ, ಸದರಿ ಚೆಕ್ಕಿನ ಹಣವನ್ನು ಪಡೆದುಕೊಳ್ಳಲು ಸದರಿ ಖಾತೆಯಲ್ಲಿ ಮೊತ್ತವು ಸಾಕಷ್ಟಿರುವುದಿಲ್ಲವೆಂದು ತಿಳಿಸಿ ದಿನಾಂಕ 10.6.2008ರ ಹಿಂಬರಹದೊಂದಿಗೆ ಸದರಿ ಚೆಕ್ಕನ್ನು ಹಿಂದಿರುಗಿಸಲಾಗಿತ್ತು. ದೂರುದಾರನು, ವಾಸ್ತವವಾಗಿ, ಸದರಿ ಹಿಂಬರಹವನ್ನು ಸ್ವೀಕರಿಸಿದ ನಂತರ ಆರ್‌ಪಿಎಡಿ ಅಲ್ಲದೆ ದಾಖಲು ಮಾಡಿದ ಪ್ರಮಾಣ ಪತ್ರದ ಮೂಲಕ ದಿನಾಂಕ 30.6.2008ರಂದು ಕಾನೂನು ಬದ್ಧ ನೋಟೀಸ್‌ನ್ನು ನೀಡಲಾಯಿತು ಮತ್ತು ಅದನ್ನು 12.07.2008ರಂದು 'ಕ್ಲೇಮು ಆಗಿರುವುದಿಲ್ಲವೆಂದು' ಹಿಂದಕ್ಕೆ ಕಳುಹಿಸಲಾಗಿತ್ತು. ಆದುದರಿಂದ ಸೀಮಿತ ಅವಧಿಯೊಳಗೆ ಎಂದರೆ ಆಪಾದಿತಳಿಗೆ ನೋಟೀಸ್‌ನ್ನು ಜಾರಿ ಮಾಡಲಾಗಿದೆಯೆಂದು ಭಾವಿಸಿದ ದಿನಾಂಕದಿಂದ, ದೂರುದಾರನು ಅಧಿವಿಚಾರಣಾ ನ್ಯಾಯಾಲಯದ ಮುಂದೆ ದೂರನ್ನು ದಾಖಲಿಸಿದ್ದಾರೆ.

6. ಆಪಾದಿತ ಅರ್ಜಿದಾರಳು, ನ್ಯಾಯಾಲಯದ ಮುಂದೆ ಹಾಜರಾಗಿ, ಮೇಲೆ ಸೂಚಿಸಲಾದಂತೆ ಹಾಗೂ ಅರ್ಜಿದಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು ಈಗಾಗಲೇ ವಾದಿಸಲಾದಂತೆ ಬೇರೆ ಬೇರೆ ಆಧಾರಗಳ ಮೇಲೆ ದೂರನ್ನು ವಿರೋಧಿಸಿದ್ದಾಳೆ. ದೂರುದಾರನೇ ಆಪಾದಿತರಿಂದ 2 ಲಕ್ಷ ರೂ.ಗಳ ಮೊತ್ತವನ್ನು ತೆಗೆದುಕೊಂಡಿದ್ದನೆಂದು ಮತ್ತು ನಗದಿನ ರೂಪದಲ್ಲಿ 50,000/-

ರೂ. ಮೊತ್ತವನ್ನು ಒಪ್ಪಿಕೊಂಡು, ಡಿಡಿ ಮೂಲಕ ಒಂದು ಲಕ್ಷ ರೂ.ಗಳನ್ನು ಹಿಂತಿರುಗಿಸಿದ್ದಾನೆಂಬುದು ಆಪಾದಿತಳ ಪ್ರತಿವಾದವಾಗಿದೆ. 2 ಲಕ್ಷ ರೂ.ಗಳಲ್ಲದೆ ಇನ್ನೂ 50,000/– ರೂ.ಗಳ ಮೊತ್ತವು ಬಾಕಿಯಿರುತ್ತದೆ. ಆದರೆ ದೂರುದಾರನು ತನ್ನ ಅಕ್ರಮ ಲಾಭಕ್ಕಾಗಿ ಸದರಿ ವ್ಯವಹಾರವನ್ನು ಪರಿವರ್ತಿಸಿದ್ದಾನೆ, ವಾಸ್ತವವಾಗಿ, ಆಪಾದಿತಳ ಮತ್ತು ದೂರುದಾರನ ನಡುವೆ ಹತ್ತಿರದ ಸಂಬಂಧವಿರುವ ಕಾರಣದಿಂದ, ದೂರುದಾರನು, ಆಪಾದಿತಳ ಮನೆಯಿಂದ ಮೂರು ಚೆಕ್ಕುಗಳನ್ನು ಕಳ್ಳತನ ಮಾಡಿದ್ದು, ಆಪಾದಿತನಿಗೆ ಹಾನಿ ಮಾಡಿ ತನ್ನ ವಾದವನ್ನು ಪುಷ್ಠೀಕರಿಸಿಕೊಳ್ಳುವ ಸಲುವಾಗಿ ಕ್ಷುದ್ರ ದೂರನ್ನು ಸಲ್ಲಿಸಿದ್ದಾನೆ. ವಾಸ್ತವವಾಗಿ ಮೂರು ಚೆಕ್ಕುಗಳು ಕಳ್ಳತನವಾಗಿರುವುದು ಅರಿವಿಗೆ ಬಂದಿದ್ದು, ಆಪಾದಿತ ಅರ್ಜಿದಾರಳು, ಭಾರತ ದಂಡ ಸಂಹಿತೆಯ 380, 465, 469 ಮತ್ತು 471ನೇ ಪ್ರಕರಣಗಳ ಮೇರೆಗೆ ದಂಡನೀಯವಾದ ಅಪರಾಧಕ್ಕೆ ಸಂಬಂಧಿಸಿದಂತೆ ದೂರುದಾರನ ವಿರುದ್ಧ ಜೆಎಂಎಫ್‌ಸಿ ಬಿಚೊಲಿಮ್ ನ್ಯಾಯಾಲಯದ ಮುಂದೆ ದೂರನ್ನು ನೀಡಿದ್ದು, ಅಪರಾಧ ಸಂ.106/2009, ದಿನಾಂಕ 22.7.2009ರಲ್ಲಿ ಪ್ರಥಮ ಮಾಹಿತಿ ವರದಿಯನ್ನು ದಾಖಲಿಸಲಾಗಿತ್ತು. ಆದುದರಿಂದ ಅವನಿಗೆ ತಕ್ಷಣದ ಕ್ರಮವನ್ನು ಕೈಗೊಳ್ಳಲಾಗಿತ್ತು. ಅಷ್ಟೇ ಅಲ್ಲದೆ, ಸಾಕ್ಷ್ಯ ನಡೆಯುತ್ತಿರುವ ಸಮಯದಲ್ಲಿ ದೂರುದಾರನು, ಯುಕ್ತ ಸಂದೇಹವನ್ನು ಮೀರಿ ಚೆಕ್ಕಿನಲ್ಲಿರುವ ಸಹಿಯು ಆಪಾದಿತಳದೇ ಎಂದು ರುಜುವಾತುಪಡಿಸಿರುವುದಿಲ್ಲ. ಆದುದರಿಂದ ಆಪಾದಿತಳು, ದೂರನ್ನು ವಜಾಗೊಳಿಸಬೇಕೆಂದು ಮತ್ತು ತತ್ಪರಿಣಾಮವಾಗಿ ಅವಳನ್ನು ಖುಲಾಸೆಗೊಳಿಸಲು ವಾದಿಸಿದ್ದಾರೆ.

7. ಅಧಿವಿಚಾರಣೆ ನಡೆಯುವ ಸಮಯದಲ್ಲಿ, ದೂರುದಾರಳನ್ನು ಪ್ರಾಸಾ.1 ಎಂದು ಅವಳನ್ನೆ ಪರಿಶೀಲಿಸಲಾಗಿದ್ದು, ಬ್ಯಾಂಕು ವ್ಯವಸ್ಥಾಪಕ ರತ್ನಕಾಂತ್ ಶಿರೋಧರ್‌ರನ್ನು ಪ್ರಾಸಾ.2 ಎಂದು ಪರಿಶೀಲಿಸಲಾಗಿದ್ದು, ನಿಶಾನೆ ಪಿ.1 ರಿಂದ ಪಿ.7 ರವರೆಗಿನ ಸುಮಾರು 7 ರಷ್ಟು ದಸ್ತಾವೇಜುಗಳನ್ನು ಗುರುತು ಹಾಕಲಾಗಿದೆ. ಆಪಾದಿತರನ್ನು ಪ್ರತಿವಾದಿ ಸಾಕ್ಷ್ಯವೆಂದು ಸಹ ಪರಿಶೀಲಿಸಲಾಗಿದ್ದು, ನಿಶಾನೆ ಪ್ರತಿವಾದಿ ಸಾಕ್ಷ್ಯ. 1 ರಿಂದ ಪ್ರತಿವಾದಿ ಸಾಕ್ಷ್ಯ 12ರವರೆಗೆ ಗುರುತು ಹಾಕಲಾಗಿದೆ. ದಾಖಲೆಯಲ್ಲಿರುವ ಸಂಪೂರ್ಣ ಸಾಕ್ಷ್ಯಾಧಾರಗಳನ್ನು ಮೌಲ್ಯಮಾಪನ ಮಾಡಿದ

ನಂತರ, ಅಧಿವಿಚಾರಣಾ ನ್ಯಾಯಾಲಯವು, ಅಪರಾಧ ನಿರ್ಣಯ ಮತ್ತು ಮೇಲಿನ ಸವಿವರವಾದಂಥ ಶಿಕ್ಷೆಯನ್ನು ನೀಡಿದ್ದಾರೆ.

8. ಅಪರಾಧ ನಿರ್ಣಯ ಮತ್ತು ಶಿಕ್ಷೆಯ ಸದರಿ ತೀರ್ಪಿನಿಂದ ಬಾಧಿತರಾಗಿರುವ ಪುನರ್ ಪರಿಶೀಲನಾ ಅರ್ಜಿದಾರಳು ತುಮಕೂರಿನಲ್ಲಿರುವ VIನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ಮುಂದೆ ಕ್ರಿಮಿನಲ್ ಅಪೀಲು ಸಂಖ್ಯೆ 124/2012ರಲ್ಲಿ ಪುನರ್ ಪರಿಶೀಲನಾ ಅರ್ಜಿದಾರಳು ಮೊದಲ ಅಪೀಲು ನ್ಯಾಯಾಲಯದ ಮೆಟ್ಟಿಲೇರಿದ್ದಾಳೆ. ದಾಖಲೆಯಲ್ಲಿರುವ ಸಂಪೂರ್ಣ ಸಾಕ್ಷ್ಯಾಧಾರಗಳನ್ನು ಮರು–ಮೌಲ್ಯಮಾಪನ ಮಾಡಿದ ನಂತರ, ಮೊದಲ ಅಪೀಲು ನ್ಯಾಯಾಲಯವು ದಿನಾಂಕ 20.11.2015ರ ತೀರ್ಪಿನ ಪ್ರಕಾರ, ಅಧಿವಿಚಾರಣಾ ನ್ಯಾಯಾಲಯವು ಹೊರಡಿಸಿದ ಅಪರಾಧ ನಿರ್ಣಯದ ಮತ್ತು ಶಿಕ್ಷೆಯ ತೀರ್ಪನ್ನು ದೃಢಪಡಿಸುವ ಮುಖಾಂತರ ಅಪೀಲನ್ನು ವಜಾಗೊಳಿಸಿದೆ.

9. ಅಪೀಲನ್ನು ಮುಂದುವರಿಸುವ ಅವಧಿಯಲ್ಲಿ, ಪುನರ್ ಪರಿಶೀಲನಾ ಅರ್ಜಿದಾರಳು ಬರವಣಿಗೆ ತಜ್ಞರ ಅಭಿಪ್ರಾಯಕ್ಕಾಗಿ ಚೆಕ್ಕಿನಲ್ಲಿರುವ ವಿವಾದಿತ ಸಹಿ, ನಿಶಾನೆ ಪಿ.1ರ ಉಲ್ಲೇಖವನ್ನು ಕೋರಿ ಭಾರತ ಸಾಕ್ಷ್ಯ ಅಧಿನಿಯಮದ 45ನೇ ಪ್ರಕರಣದ ಮೇರೆಗೆ ಅರ್ಜಿಯನ್ನು ಸಲ್ಲಿಸಿದ್ದಾಳೆ. ಮೊದಲ ಅಪೀಲು ನ್ಯಾಯಾಲಯವು, ಸವಿವರವಾಗಿ ಆಲಿಸಿದ ನಂತರ ತನ್ನ ಮುಂದೆ ಮಂಡಿಸಲಾದ ಸಾಕ್ಷ್ಯಾಧಾರಗಳನ್ನು ಪರಿಗಣಿಸಿ, ತಜ್ಞರ ಅಭಿಪ್ರಾಯದ ಸಂಬಂಧ ಚೆಕ್ಕನ್ನು ಕಳುಹಿಸುವ ಅಗತ್ಯವಿರಲಿಲ್ಲವೆನ್ನುವ ತೀರ್ಮಾನಕ್ಕೆ ಬಂದಿದೆ. ಆದುದರಿಂದ, ಅಪೀಲನ್ನು ವಜಾಗೊಳಿಸುವಾಗ, ಸದರಿ ಅರ್ಜಿಯನ್ನು ಸಹ ವಜಾಗೊಳಿಸಿದೆ.

10. ಈ ನ್ಯಾಯಾಲಯವು ಈಗ ಅಧಿವಿಚಾರಣಾ ನ್ಯಾಯಾಲಯ ಮತ್ತು ಮೊದಲ ಅಪೀಲು ನ್ಯಾಯಾಲಯವು ನೀಡಿದಂಥ ನಿರ್ಣಯಗಳು ಯುಕ್ತವಾಗಿವೆಯೇ ಹಾಗೂ ಆಪಾದಿತಳು, ಮೊದಲ ಅಪೀಲು ನ್ಯಾಯಾಲಯದ ಮುಂದೆ ಭಾರತೀಯ ಸಾಕ್ಷ್ಯ ಅಧಿನಿಯಮದ 45ನೇ ಪ್ರಕರಣದ ಮೇರೆಗೆ ಸಲ್ಲಿಸಲಾದ ಅರ್ಜಿಯಲ್ಲಿ

ಕೋರಲಾದಂತೆ ತಜ್ಞರ ಅಭಿಪ್ರಾಯಕ್ಕೆ ಚೆಕ್ಕನ್ನು ಕಳುಹಿಸುವ ಸಂಬಂಧ ಹಕ್ಕುಳ್ಳವರಾಗಿದ್ದಾರೆಯೇ ಎಂಬುದನ್ನು ನೋಡಬೇಕು.

11. ಅರ್ಜಿದಾರಳ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು, ಅರ್ಜಿದಾರಳಿಗೆ ಕಾನೂನು ನೋಟೀಸ್‌ನ್ನು ಯುಕ್ತವಾಗಿ ನೀಡಲಾಗಿದೆಯೆನ್ನುವ ವಾದವನ್ನು ಕೈಗೆತ್ತಿಕೊಂಡಿದ್ದರೂ, ಮತ್ತು ದೂರುದಾರನು, ವರ್ಗಾವಣೀಯ ಲಿಖಿತ ಅಧಿನಿಯಮ, 1881ರ 138ನೇ ಪ್ರಕರಣದ ಕಡ್ಡಾಯ ಅಗತ್ಯತೆಯನ್ನು ಅನುಸರಿಸಿಲ್ಲವೆಂದು ವಾದಿಸಿದ್ದಾರೆ. ಆದರೆ, ಮಾನ್ಯ ವಕೀಲರು, ಈ ಆಧಾರಕ್ಕೆ ಸಂಬಂಧಪಡುವಷ್ಟರ ಮಟ್ಟಿಗೆ ಹೆಚ್ಚಿನ ಗಮನ ನೀಡಿರುವುದಿಲ್ಲ. ಅವರು ಎತ್ತಲಾದ ಎರಡನೇ ವಿವಾದಾಂಶ ಎಂದರೆ, ಅಧಿವಿಚಾರಣಾ ನ್ಯಾಯಾಲಯವು ಸಹಿಯನ್ನು ಹೋಲಿಕೆ ಮಾಡಿರುವುದು ಮತ್ತು ವಿವಾದಿತ ಚೆಕ್ಕಿನಲ್ಲಿ ಅರ್ಜಿದಾರಳ ಸಹಿಗೆ ಸಂಬಂಧಪಡುವಷ್ಟರ ಮಟ್ಟಿಗೆ ಮೊದಲ ಅಪೀಲು ನ್ಯಾಯಾಲಯವು ದೃಢಪಡಿಸಲಾದಂತೆ ಎರಡನೇ ವಿವಾದಾಂಶಕ್ಕೆ ಸಂಬಂಧಪಟ್ಟ ಅವರ ವಾದಗಳನ್ನು ಮುಖ್ಯವಾಗಿ ಕೇಂದ್ರೀಕರಿಸಿದ್ದಾರೆ. ಇದನ್ನು ಗಂಭೀರವಾಗಿ ವಿರೋಧಿಸದಿದ್ದರೂ, ಈ ನ್ಯಾಯಾಲಯವು ದಾಖಲೆಯಲ್ಲಿರುವ ಸಾಕ್ಷ್ಯಾಧಾರಗಳನ್ನೂ ನಿಶಾನೆ ಪಿ.7ರಲ್ಲಿ ಹಾಜರುಪಡಿಸಲಾದ ಮತ್ತು ಗುರುತು ಮಾಡಲಾದ ದಸ್ತಾವೇಜುಗಳನ್ನು ಅವಗಾಹಿಸಿದ್ದರೂ ಅರ್ಜಿದಾರಳಿಗೆ ಹೊರಡಿಸಿದ ನೋಟೀಸ್‌ನ್ನು ಕಳುಹಿಸಿದ್ದರೂ, ಅರ್ಜಿದಾರಳು ಸದರಿ ಅಂಚೆ ಕವರನ್ನು ಕ್ಲೇಮು ಮಾಡಿಲ್ಲವೆಂಬ ಅಂಚೆ ಷರಾದೊಂದಿಗೆ ಹಿಂದಿರುಗಿಸಲಾಗಿದೆ. ಆದರೆ ತರುವಾಯದಲ್ಲಿ ನಿಶಾನೆ ಪಿ.7ರಲ್ಲಿ ಸೂಚಿಸಲಾದ ಸದರಿ ವಿಳಾಸಕ್ಕೆ ಹೊರಡಿಸಲಾದ ಸಮನುಗಳನ್ನು, ಆಪಾದಿತ ಅರ್ಜಿದಾರಳಿಗೆ ಸದರಿ ಸಮನುಗಳೊಂದಿಗೆ ನೀಡಲಾಗಿತ್ತು ಮತ್ತು ಅವಳು ಈ ನ್ಯಾಯಾಲಯದ ಮುಂದೆ ಹಾಜರಾಗಿದ್ದಾಳೆ.

12. ಪ್ರಾಸಾ.1ರ ಪಾಟೀ ಸವಾಲಿನಿಂದ ಕಂಡು ಬರಬಹುದಾದಂತೆ, ಈ ದೃಷ್ಟಿಕೋನಕ್ಕೆ ಸಂಬಂಧಪಡುವಷ್ಟರ ಮಟ್ಟಿಗೆ ಯಾವುದೇ ಪಾಟೀ ಸವಾಲನ್ನು ನಡೆಸಿರುವುದಿಲ್ಲ. ಆಪಾದಿತಳಿಗೆ ಹೊರಡಿಸಿದ ಆ ನೋಟೀಸ್‌ನ್ನು ಸರಿಯಾಗಿ

ಹೊರಡಿಸಿರುವುದಿಲ್ಲ. ಸದರಿ ದಸ್ತಾವೇಜಿಗೆ ಸಂಬಂಧಿಸಿದಂತೆ, ಅಂಚೆ ಪ್ರಾಧಿಕಾರಿಗಳು ನೀಡಿದ ಹಿಂಬರಹ ತಪ್ಪಾಗಿದೆಯೆಂಬುದನ್ನು ರುಜುವಾತುಪಡಿಸಲು ಆ ಆಪಾದಿತಳು ಅಂಚೆ ಪ್ರಾಧಿಕಾರಗಳನ್ನು ಪರಿಶೀಲಿಸಲು ಯಾವುದೇ ಕ್ರಮಗಳನ್ನು ಕೈಗೊಂಡಿಲ್ಲವೆಂಬುದನ್ನು ಮತ್ತೆ ಸೇರಿಸಲಾಗಿದೆ. ಆದುದರಿಂದ, ಈ ದೃಷ್ಟಿಕೋನಕ್ಕೆ ಸಂಬಂಧಪಡುವಷ್ಟರ ಮಟ್ಟಿಗೆ ಅಧಿವಿಚಾರಣಾ ನ್ಯಾಯಾಲಯ ಹಾಗೂ ಅಪೀಲು ನ್ಯಾಯಾಲಯಗಳು ನೀಡಿದ ನಿರ್ಣಯಗಳು ಸರಿಯಾದ ಆಧಾರಗಳಿಂದ ಕೂಡಿವೆ ಮತ್ತು ಇದು ಯಾವುದೇ ಹಸ್ತಕ್ಷೇಪವನ್ನು ಕೋರುವುದಿಲ್ಲ.

13. ಅರ್ಜಿದಾರಳು ತೆಗೆದುಕೊಂಡಿರುವ ತುಂಬಾ ಮುಖ್ಯವಾದ ಮತ್ತು ಪ್ರಧಾನ ಆಧಾರ ಯಾವುದೆಂದರೆ, ಅಧಿವಿಚಾರಣಾ ನ್ಯಾಯಾಲಯ ಹಾಗೂ ಮೊದಲ ಅಪೀಲು ನ್ಯಾಯಾಲಯವು, ಭಾರತೀಯ ಸಾಕ್ಷ್ಯ ಅಧಿನಿಯಮದ 73ನೇ ಪ್ರಕರಣದ ಮೇರೆಗೆ ಚೆಕ್ಕಿನ ಮೇಲಿರುವ ಅರ್ಜಿದಾರಳ ಸಹಿಯನ್ನು ಹೋಲಿಕೆ ಮಾಡುವಲ್ಲಿ ಗಂಭೀರ ತಪ್ಪೆಸಗಿದೆಯೆಂಬುದಾಗಿದ್ದು, ಅಧಿವಿಚಾರಣಾ ನ್ಯಾಯಾಲಯದ ಮುಂದೆಯಾಗಲಿ ಅಥವಾ ಮೊದಲ ಅಪೀಲು ನ್ಯಾಯಾಲಯದ ಮುಂದೆಯಾಗಲಿ ಅವಳ ಪ್ರತಿವಾದವನ್ನು ರುಜುವಾತುಪಡಿಸಲು ಅರ್ಜಿದಾರಳಿಗೆ ಸಾಕಷ್ಟು ಅವಕಾಶವನ್ನು ನೀಡುವ ಸಲುವಾಗಿ ಯುಕ್ತ ಪ್ರಕ್ರಿಯೆಯನ್ನು ಅವರು ಅನುಸರಿಸಿಲ್ಲವೆಂಬುದಾಗಿದೆ. ಅರ್ಜಿದಾರಳ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು, ದೂರು ನೀಡುವ ಮೂಲಕ ಸುಳ್ಳು ಸೃಷ್ಟಿ ಮಾಡಿ ಚೆಕ್ಕಿನಲ್ಲಿ ಸಹಿ ಮಾಡಿರುವುದರ ಬಗ್ಗೆ ತಿಳಿದು ಬಂದ ಕೂಡಲೇ ಅಧಿಕಾರ ವ್ಯಾಪ್ತಿಯ ದಂಡಾಧಿಕಾರಿಯವರ ಮುಂದೆ ದೂರುದಾರರು, ದೂರನ್ನು ದಾಖಲಿಸಿದ್ದರೆಂದು ವಾದಿಸಿದ್ದಾರೆ. ಅವಳು ಸಕ್ಷಮ ನ್ಯಾಯಾಲಯದ ಮುಂದೆ ದೂರನ್ನು ದಾಖಲಿಸಿದ್ದು, ವಾಸ್ತವವಾಗಿ, ನ್ಯಾಯಾಲಯವು ಈ ಸಂಬಂಧದಲ್ಲಿ ತನಿಖೆ ನಡೆಸಲು ಆದೇಶಿಸಿದೆ. ಅಷ್ಟರಮಟ್ಟಿಗೆ ಕೆಲವು ದಸ್ತಾವೇಜುಗಳನ್ನು ಸಹ ನ್ಯಾಯಾಲಯದ ಮುಂದೆ ಹಾಜರುಪಡಿಸಲಾಗಿತ್ತು. ಗೋವಾ ಪೊಲೀಸರು ಸದರಿ ಚೆಕ್ಕನ್ನು, ಸದರಿ ಪ್ರಕರಣದಲ್ಲಿ ಆಪಾದಿತನು ಸುಳ್ಳು ಸೃಷ್ಟಿ ಮಾಡಿದ್ದಾನೆಯೇ ಎಂಬುದನ್ನು ದೃಢಪಡಿಸುವ ಸಲುವಾಗಿ ತನಿಖೆ ನಡೆಸಲು ಸದರಿ ಚೆಕ್ಕನ್ನು ಹಸ್ತಾಂತರಿಸಲು ಅಧಿವಿಚಾರಣಾ

ನ್ಯಾಯಾಲಯವನ್ನು ಸಹ ಕೋರಿದ್ದರು. ಪ್ರಾಸಾ.2 ಎಂದು ಪರಿಶೀಲಿಸಲಾಗಿರುವ ಬ್ಯಾಂಕು ವ್ಯವಸ್ಥಾಪಕರು ಸದರಿ ಮುಖ್ಯ ವಿಚಾರಣೆಯಲ್ಲೇ, ವಿವಾದಿತ ಚೆಕ್‌ನಲ್ಲಿರುವ ಸಹಿ ಆಪಾದಿತಳ ಸಹಿಯಾಗಿರುವುದಿಲ್ಲವೆಂದು ವಾದಿಸಿದ್ದಾರೆ. ಆದುದರಿಂದ, ಅಧಿವಿಚಾರಣಾ ನ್ಯಾಯಾಲಯ ಮತ್ತು ಮೊದಲ ಅಪೀಲು ನ್ಯಾಯಾಲಯವು, ಆಪಾದಿತಳ ಅಪರಾಧ ನಿರ್ಣಯವನ್ನು ಮಾಡಲು ಭಾರತೀಯ ಸಾಕ್ಷ್ಯ ಅಧಿನಿಯಮದ 73ನೇ ಪ್ರಕರಣದ ಮೇರೆಗಿನ ಸಹಿಯ ಹೋಲಿಕೆಯನ್ನು ಆಧರಿಸಿ ಏಕಮೇವವಾಗಿ ಗಂಭೀರ ತಪ್ಪೆಸಗಿದೆ. ಆದುದರಿಂದ ಈ ನ್ಯಾಯಾಲಯವು ಸದರಿ ನಿರ್ಣಯವನ್ನು ವಿಪರ್ಯಯಗೊಳಿಸುವುದಕ್ಕೆ ತಕ್ಕುದಾಗಿರುತ್ತದೆ.

14. ಮತ್ತೊಂದು ಕಡೆಯಲ್ಲಿ, ಎದುರುದಾರರ ಪರವಾಗಿ ಹಾಜರಾಗಿ ಮಾನ್ಯ ವಕೀಲರು, ಭಾರತೀಯ ಸಾಕ್ಷ್ಯ ಅಧಿನಿಯಮದ 73ನೇ ಪ್ರಕರಣದ ಮೇರೆಗೆ ನ್ಯಾಯಾಲಯವು ಚೆಕ್ಕಿನಲ್ಲಿರುವ ಸಹಿಯನ್ನು ಹೋಲಿಸುವುದಷ್ಟೇ ಅಲ್ಲ, ಇತರ ಸಾಕ್ಷ್ಯಾಧಾರಗಳನ್ನು ಎಂದರೆ ಸಹಿಯಲ್ಲಿ ವ್ಯತ್ಯಾಸವಾಗದಿರುವ, ಆದರೆ ಆಪಾದಿತಳ ಖಾತೆಯಲ್ಲಿ ನಗದಿನ ಕೊರತೆಯಿಂದ ಚೆಕ್ಕು ನಿರಾಕರಣೆಯಾಗಿರುವುದಕ್ಕೆ ಸಂಬಂಧಿಸಿದ ಇತರ ಸಾಕ್ಷ್ಯಾಧಾರಗಳನ್ನು ಸಹ ಪರಿಗಣಿಸಲಾಗಿದೆ. ಚೆಕ್ಕು ಆಪಾದಿತಳಿಗೆ ಸೇರಿದವಲ್ಲವೆಂಬುದರಲ್ಲಿ ಯಾವುದೇ ವಿವಾದವಿಲ್ಲ. ಅಲ್ಲದೆ, ಆಪಾದಿತಳು ಭಾರತೀಯ ಸಾಕ್ಷ್ಯ ಅಧಿನಿಯಮದ 45ನೇ ಪ್ರಕರಣದ ಮೇರೆಗೆ ಅಧಿವಿಚಾರಣಾ ನ್ಯಾಯಾಲಯದ ಮುಂದೆ ಯಾವುದೇ ಅರ್ಜಿಯನ್ನು ಸಲ್ಲಿಸಿರುವುದಿಲ್ಲ. ಆದುದರಿಂದ ಅಧಿವಿಚಾರಣಾ ನ್ಯಾಯಾಲಯವು, ಭಾರತೀಯ ಸಾಕ್ಷ್ಯ ಅಧಿನಿಯಮದ 73ನೇ ಪ್ರಕರಣದ ಮೇರೆಗೆ ತನ್ನ ಅಧಿಕಾರಗಳನ್ನು ಚಲಾಯಿಸಿ, ಅನಿವಾರ್ಯವಾಗಿ ಮತ್ತು ಸರಿಯಾಗಿ ಸಹಿಯನ್ನು ಹೋಲಿಕೆ ಮಾಡಿದೆ. ಆದುದರಿಂದ, ಈ ಸಂಬಂಧದಲ್ಲಿ ಅಧಿವಿಚಾರಣಾ ನ್ಯಾಯಾಲಯವಾಗಲಿ ಅಥವಾ ಮೊದಲ ಅಪೀಲು ನ್ಯಾಯಾಲಯವಾಗಲಿ ಯಾವುದೇ ತಪ್ಪೆಸಗಿರುವುದಿಲ್ಲ.

15. ಪಕ್ಷಕಾರರು ಸಲ್ಲಿಸಿದ ಸಾಕ್ಷ್ಯದ ಆಧಾರದ ಮೇಲೆ ಮೇಲಿನ ಆಧಾರದೊಂದಿಗೆ ಚರ್ಚಿಸಲು ಪ್ರಸ್ತಾವಿಸುವ ಮೊದಲು, ನ್ಯಾಯಾಲಯವು, ಭಾರತೀಯ

ಸಾಕ್ಷ್ಯ ಅಧಿನಿಯಮದ 45 ಮತ್ತು 73ನೇ ಪ್ರಕರಣದ ಮೇರೆಗೆ, ಹೇಗೆ ಮತ್ತು ಯಾವ ಸಂದರ್ಭಗಳಲ್ಲಿ ಅಧಿಕಾರಗಳನ್ನು ಚಲಾಯಿಸುತ್ತದೆ ಎಂಬುದನ್ನು ಸ್ಪಷ್ಟಪಡಿಸುವ ಸಲುವಾಗಿ ಈ ಸಂಬಂಧದಲ್ಲಿ ಮಾನ್ಯ ವಕೀಲರುಗಳು ಉದ್ಧರಿಸಿದ ನಿರ್ಣಯಗಳನ್ನು ಪರಿಶೀಲಿಸುವುದು ನ್ಯಾಯಯುತ ಮತ್ತು ಅಗತ್ಯವಾಗಿರುತ್ತದೆ.

16. ಅರ್ಜಿದಾರರ ಪರ ಹಾಜರಾಗಿರುವ ಮಾನ್ಯ ವಕೀಲರು ***ಕಲ್ಯಾಣಿ ಭಾಸ್ಕರ್ (ಶ್ರೀಮತಿ) –ವಿರುದ್ಧ– ಎಂ.ಎಸ್. ಸಂಪೂರ್ಣಂ (ಶ್ರೀಮತಿ)*** [1] ಇವರ ನಡುವಿನ ಪ್ರಕರಣದಲ್ಲಿ ವರದಿಯಾದ ತೀರ್ಪನ್ನು ಅವಲಂಬಿಸಿದ್ದಾರೆ, ಇದರಲ್ಲಿ ಸರ್ವೋಚ್ಚ ನ್ಯಾಯಾಲಯವು, ಈ ಮುಂದಿನ ರೀತಿಯಲ್ಲಿ ಅಭಿಪ್ರಾಯಪಟ್ಟಿದೆ:

> *"ವರ್ಗಾವಣೀಯ ಲಿಖಿತ ಅಧಿನಿಯಮ, 1881ರ 138ನೇ ಪ್ರಕರಣದ ಮೇರೆಗೆ ನಿರಾಕರಣೆಯಾದ ಚೆಕ್ಕಿಗೆ ಸಂಬಂಧಪಟ್ಟಂತೆ ತಜ್ಞರ ಅಭಿಪ್ರಾಯಕ್ಕಾಗಿ ದಸ್ತಾವೇಜನ್ನು ಕಳುಹಿಸುವಲ್ಲಿ ದಂಡಾಧಿಕಾರಿಯವರ ಅಧಿಕಾರ. ಚೆಕ್ಕಿನಲ್ಲಿರುವ ಸಹಿಯ ನೈಜತೆಯನ್ನು ದೃಢಪಡಿಸಲು ಬರವಣಿಗೆ ತಜ್ಞರ ಅಭಿಪ್ರಾಯ ಕೋರಲು ಆ ಚೆಕ್ಕನ್ನು ಕಳುಹಿಸಲು ಆಪಾದಿತನು ಕೋರುವುದು. ಅವರು ಆಪಾದಿತನು ದೂರಿನ ಪ್ರಕರಣವನ್ನು ಖಂಡಿಸಲು ಹಕ್ಕುಳ್ಳವನಾಗಿದ್ದು, ಆಪಾದಿತನ ಉದ್ದೇಶವು ಕಾಟ ಕೊಡುವುದಾಗಿದೆ ಅಥವಾ ಕ್ರಿಮಿನಲ್ ವ್ಯವಹರಣೆಗಳನ್ನು ವಿಳಂಬ ಮಾಡುವುದಾಗಿದೆಯೆಂದು ಪರಿಗಣಿಸಿದ ಹೊರತು ಅಂಥ ಮನವಿಯನ್ನು ಸಮ್ಮತಿಸಬೇಕು. ಆ ವಿಷಯವನ್ನು ಖಂಡಿಸುವುದಕ್ಕೆ ಸಂಬಂಧಿಸಿದ ಒಳ್ಳೆಯ ಸಾಕ್ಷ್ಯಾಧಾರವನ್ನು ಒದಗಿಸಿದ ಆಪಾದಿತಳ ವಿರುದ್ಧ ಕ್ರಿಮಿನಲ್ ವ್ಯವಹರಣೆಗಳನ್ನು ಪ್ರಾರಂಭಿಸಲು ದೂರುದಾರನು ಅವಲಂಬಿಸಿರುವ ಚೆಕ್ಕು. ಸದರಿ ದಸ್ತಾವೇಜನ್ನು ಪರಿಶೀಲಿಸುವುದಕ್ಕಾಗಿ ಮತ್ತು ಬರವಣಿಗೆ*

1. (2007) 2 ಎಸ್‌ಸಿಸಿ 258

*ತಜ್ಞರ ಅಭಿಪ್ರಾಯಕ್ಕಾಗಿ, ಕಳುಹಿಸಲು ನಿರಾಕರಿಸುವ ಮೂಲಕ ದಂಡಾಧಿಕಾರಿಯವರು ಅದನ್ನು ಖಂಡಿಸುವ ಅವಕಾಶವನ್ನು ಆಪಾದಿತನಿಗೆ ವಂಚಿಸುವರು. ತನ್ನ ಸಾಕ್ಷ್ಯವನ್ನು ಮಂಡಿಸಲು ಅವಳಿಗೆ ಅವಕಾಶವನ್ನು ನೀಡದೆ ಆಪಾದಿತರನ್ನು ಅಪರಾಧಿಯೆಂದು ನಿರ್ಣಯಿಸಲು ಸಾಧ್ಯವಿಲ್ಲ. ಸದರಿ ಅವಕಾಶದ ನಿರಾಕರಣೆಯು ಭಾರತೀಯ ಸಾಕ್ಷ್ಯ ಅಧಿನಿಯಮದ 45ನೇ ಪ್ರಕರಣದ ಮೇರೆಗೆ ಅನುಚಿತ ಅಧಿವಿಚಾರಣೆಯನ್ನು ನಡೆಸಲು ಕಾರಣವಾಗುತ್ತದೆ.*

*ನ್ಯಾಯವನ್ನು ಸುನಿಶ್ಚಿತಗೊಳಿಸಲು ರೂಪಿಸಲಾದ ಪ್ರಕ್ರಿಯೆಯ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂಬುದು ಅವಶ್ಯಕವಾಗಿದೆ ಮತ್ತು ನ್ಯಾಯಾಲಯಗಳು, ಅವುಗಳನ್ನು ಉಲ್ಲಂಘಿಸಿಲ್ಲವೆಂಬುದನ್ನು ನೋಡಿಕೊಳ್ಳುವಲ್ಲಿ ಜಾಗರೂಕವಾಗಿರಬೇಕು. ನಿಷ್ಪಕ್ಷಪಾತ ಅಧಿವಿಚಾರಣೆಯು ಪ್ರತಿವಾದವನ್ನು ಬೆಂಬಲಿಸುವಲ್ಲಿ ಸಾಕ್ಷ್ಯವನ್ನು ಒದಗಿಸುವ ಆಪಾದಿತನ ಮುಗ್ಧತೆಯನ್ನು ರುಜುವಾತುಪಡಿಸಲು ಕಾನೂನಿನ ಮೂಲಕ ನೀಡುವ ನಿಷ್ಪಕ್ಷಪಾತ ಮತ್ತು ಯುಕ್ತ ಅವಕಾಶಗಳನ್ನು ಒಳಗೊಂಡಿರುವ, ಮೌಲ್ಯಯುತವಾದ ಹಕ್ಕುಗಳಾಗಿರುತ್ತವೆ ಮತ್ತು ಅಂಥ ಹಕ್ಕಿನ ನಿರಾಕರಣೆ ಎಂದರೆ ನಿಷ್ಪಕ್ಷಪಾತ ಅಧಿವಿಚಾರಣೆಯ ನಿರಾಕರಣೆ."*

16(ಎ) ***ಅಜಯ್ ಕುಮಾರ್ ಪರ್ಮಾರ್ –ವಿರುದ್ಧ– ರಾಜಸ್ಥಾನ ರಾಜ್ಯ*** [2] ನಡುವೆ ಮತ್ತೊಂದು ತೀರ್ಪಿನಲ್ಲಿ, ಸರ್ವೋಚ್ಚ ನ್ಯಾಯಾಲಯವು 23ನೇ ಕಂಡಿಕೆಯಲ್ಲಿ ಈ ಮುಂದಿನ ರೀತಿಯಲ್ಲಿ ಅಭಿಪ್ರಾಯಪಟ್ಟಿದೆ:

2. ಎಐಆರ್ 2012 ಎಸ್‌ಸಿಡಬ್ಲ್ಯೂ 5492

*"23. ಬರವಣಿಗೆ ತಜ್ಞರ ಅಭಿಪ್ರಾಯವು, ಯಾವುದೇ ಇತರ ಸಾಕ್ಷಿದಾರರ ರೀತಿ ದೋಷಪೂರಿತವಾಗಲು ತಪ್ಪಿರಬಹುದು/ಹೊಣೆಯಾಗಿರಬಹುದು ಮತ್ತು ಇದನ್ನು ಅನುಪಯುಕ್ತವಾದುದೆಂದು ತಳ್ಳಿಹಾಕಲು ಸಾಧ್ಯವಾಗುವುದಿಲ್ಲ. ಒಪ್ಪಿಕೊಳ್ಳಲಾದ ಬರಹದೊಂದಿಗೆ ವಿವಾದಿತ ಬರಹವನ್ನು ಹೋಲಿಸಿ ನೋಡಲು ತಮ್ಮ ಸ್ವಂತ ವಿವೇಚನೆಯನ್ನು ಬಳಸುವ ಮೂಲಕ ಸಹಿಗಳು ಅಥವಾ ಬರವಣಿಗೆಯನ್ನು ಹೋಲಿಸಿ ನೋಡುವುದರಿಂದ ನ್ಯಾಯಾಲಯವನ್ನು ತಡೆಯುವ ಯಾವುದೇ ಕಾನೂನು ಪ್ರತಿಷೇಧಗಳಿಲ್ಲ ಮತ್ತು ಅದೇ ಆಗಿದೆ ಅಥವಾ ವ್ಯತ್ಯಾಸವಾಗಿದೆ ಎಂದು ಸದರಿ ಕೈಬರವಣಿಗೆಯನ್ನು ರುಜುವಾತು ಪಡಿಸಲು ತಮ್ಮ ಅಭಿಪ್ರಾಯವನ್ನು ಅನ್ವಯಿಸಿ, ಸಂದರ್ಭಾನುಸಾರ, ಆದರೆ ಹಾಗೆ ಮಾಡುವಲ್ಲಿ, ನ್ಯಾಯಾಲಯವು, ಈ ಸಂಬಂಧದಲ್ಲಿ ಅದೇ ತಜ್ಞರಾಗಲು ಸಾಧ್ಯವಿಲ್ಲ ಮತ್ತು ನ್ಯಾಯಾಲಯದ ಅಭಿಪ್ರಾಯವೂ ಸಹ ನಿರ್ಣಯಕವಾಗಿರುವುದಿಲ್ಲವೆನ್ನುವ ಸಣ್ಣ ಕಾರಣಕ್ಕಾಗಿ ತಜ್ಞರ ಪಾತ್ರವನ್ನು ನಿರ್ವಹಿಸುವುದರಿಂದ ಹಿಂಜರಿಯಲೇಬೇಕಾಗುತ್ತದೆ. ಆದುದರಿಂದ, ನ್ಯಾಯಾಲಯವು ತಾನೇ ಈ ಕಾರ್ಯವನ್ನು ತನ್ನ ಮೇಲೆ ಎಳೆದುಕೊಳ್ಳುವಾಗ, ಸಹಿಗಳು ಅಥವಾ ಬರವಣಿಗೆಗಳನ್ನು ಹೋಲಿಸುವ ಆಧಾರದ ಮೇಲೆ ನಿರ್ಣಯಗಳನ್ನು ಏಕಮೇವವಾಗಿ ದಾಖಲಿಸುತ್ತದೆ, ನ್ಯಾಯಾಲಯು ರೂಪಿಸಿದ ಅಭಿಪ್ರಾಯವು ನಿರ್ಣಾಯಕವಾಗಿಲ್ಲದಿರುವುದರಿಂದ ನ್ಯಾಯಾಲಯವು ಇದರಿಂದಾಗುವ ಅಪಾಯವನ್ನು ಮನಸ್ಸಿನಲ್ಲಿಟ್ಟುಕೊಳ್ಳಲೇಬೇಕು ಮತ್ತು ನ್ಯಾಯಾಲಯವು, ತಪ್ಪು ಮಾಡುವುದಕ್ಕೆ ಆಸ್ಪದವಾಗಬಹುದು. ವಿಶೇಷವಾಗಿ, ಒಬ್ಬರಿಂದ ಈ ಪ್ರಯೋಗವನ್ನು ನಡೆಸುವಾಗ, ವಸ್ತುವಿಷಯದೊಂದಿಗೆ*

> *ವ್ಯತಿರಿಕ್ತವಾಗುವುದಿಲ್ಲ. ಆದುದರಿಂದ ನ್ಯಾಯಾಲಯವು ತನ್ನ ನಿರ್ಣಯಗಳ ನೆಲೆಗೆ ಜಾಗರೂಕತೆ ಮತ್ತು ಎಚ್ಚರಿಕೆ ವಹಿಸಬೇಕಾದ ಕಾರ್ಯವು ಹಿಂಜರಿಕೆಯದಾದ್ದರಿಂದ ಅಥವಾ ನಿಧಾನಗತಿಯಾಗುವುದರಿಂದ, ತಾನು ಮಾಡಿದ ನಿರ್ಣಯಗಳು ಏಕಮೇವ ರೀತಿಯಲ್ಲಿ ಹೋಲಿಕೆಯನ್ನು ಆಧರಿಸಿರುತ್ತವೆ. ಆದಾಗ್ಯೂ, ತಜ್ಞರದೇ ಅಥವಾ ಯಾವುದೇ ಸಾಕ್ಷಿದಾರರದೇ ಎಂಬ ಬಗ್ಗೆ ಅಭಿಪ್ರಾಯವನ್ನು ತಳೆಯುವಲ್ಲಿ, ಆಗ ನ್ಯಾಯಾಲಯವು, ತನ್ನ ತೀರ್ಮಾನಕ್ಕೆ ನಿರ್ಣಾಯಕ ಪ್ರಾಮುಖ್ಯತೆ ಅಥವಾ ಪರಿಣಾಮ ಬೀರಲು ಸಹಿಗಳನ್ನು ಅಥವಾ ಬರವಣಿಗೆಗಳನ್ನು ಹೋಲಿಸುವ ಮೂಲಕ ತನ್ನ ಸ್ವಂತ ಅಭಿಪ್ರಾಯವನ್ನು ಅನ್ವಯಿಸಬಹುದು.*

16(ಬಿ). ***ಟಿ. ನಾಗಪ್ಪ –ವಿರುದ್ಧ– ವೈ.ಆರ್. ಮುರಳಿಧರ್*** [3] ನಡುವೆ ಮತ್ತೊಂದು ನಿರ್ಣಯದಲ್ಲಿ, ಮಾನ್ಯ ಸರ್ವೋಚ್ಚ ನ್ಯಾಯಾಲಯವು ಹೀಗೆ ಅಭಿಪ್ರಾಯಪಟ್ಟಿದೆ–

> *"ಪ್ರಕರಣದಲ್ಲಿನ ಸಾಕ್ಷ್ಯದ ಸ್ವರೂಪ ಯಾವುದಾಗಿರಬೇಕು ಎಂಬುದು ವಿಷಯವಲ್ಲ, ಇದನ್ನು ನ್ಯಾಯಾಲಯದ ವಿವೇಚನೆಗೆ ಬಿಡಬೇಕು. ಆಪಾದಿತನಿಗೆ ತನ್ನ ಪ್ರತಿವಾದವನ್ನು ಹೇಗೆ ಸಾಬೀತುಪಡಿಸುವುದು ಎಂಬುದು ಅವನಿಗೆ ಗೊತ್ತಿರುತ್ತದೆ. ವ್ಯವಹರಣೆಗಳಲ್ಲಿ ಪ್ರವೀಣ ಆಗಿರುವ ನ್ಯಾಯಾಲಯವು, ಸಂಹಿತೆಯ 243ನೇ ಪ್ರಕರಣದ ಮೇರೆಗೆ (2)ನೇ ಉಪ–ಪ್ರಕರಣದ ಸಂಬಂಧದಲ್ಲಿ ಆಪಾದಿತನು ಸಲ್ಲಿಸಿದ ಅರ್ಜಿಯು ಸಾಚಾ ಆಗಿದೆಯೇ ಅಥವಾ ಇಲ್ಲವೇ ಅಥವಾ*

---

3. (2008) 5 ಎಸ್‌ಸಿಸಿ 633

*ಈ ಮೂಲಕ ಸಂಬಂಧಪಟ್ಟ ಸಾಕ್ಷ್ಯಾಧಾರಗಳನ್ನು ದಾಖಲೆಯಲ್ಲಿ ತರಲು ಉದ್ದೇಶಿಸಿದ್ದಾನೆಯೇ ಎಂಬ ಬಗ್ಗೆ ನಿರ್ಧರಿಸಲೇಬೇಕಾದುದು ಸತ್ಯ ಪೂರ್ಣವಾದುದಾಗಿದೆ. ಆದರೆ, ಸಾಮಾನ್ಯವಾಗಿ, ಸಾಕ್ಷಿದಾರರು, ಮೊದಲಾದವರನ್ನು ಸಮನು ಮಾಡುವುದಕ್ಕೆ ಸಂಬಂಧಪಟ್ಟಂತೆ ಅದರ ನೆರವನ್ನು ಪಡೆದುಕೊಳ್ಳಲು ಆಪಾದಿತನು ನ್ಯಾಯಾಲಯದ ಮೆಟ್ಟಿಲೇರುವುದಕ್ಕೆ ಅನುಮತಿ ನೀಡಬೇಕು. ಹಾಗೆ ಮಾಡಲು ಅನುಮತಿಸಿದರೆ, ಆದಾಗ್ಯೂ, ಯಾರ ಸಾಕ್ಷ್ಯವು ಯಾವುದೇ ರೀತಿಯಲ್ಲಿ ಸಂಬಂಧಪಡುವುದಿಲ್ಲವೋ ಆ ಸಾಕ್ಷಿದಾರರನ್ನು ಅಧಿವಿಚಾರಣೆ ಮಾಡಲು ಅಥವಾ ಸಮನು ಮಾಡುವುದನ್ನು ಅನಗತ್ಯವಾಗಿ ಎಳೆಯುವುದನ್ನು ಆಪಾದಿತನಿಗೆ ಅವಕಾಶ ಕೊಡಬಾರದಾದ್ದರಿಂದ ನಿಯಮಿತ ಅವಧಿಯೊಳಗೆ ಕ್ರಮಗಳನ್ನು ಕೈಗೊಳ್ಳಬೇಕು.*

*ಚೆಕ್ಕಿಗೆ ಸಂಬಂಧಿಸಿದ ಅಪೀಲುದಾರನ ಪ್ರತಿವಾದವನ್ನು ಸಮರ್ಥಿಸಲು ಜಾರಿಗೊಳಿಸುವ ಪ್ರಕ್ರಿಯೆಗಾಗಿ ಸಂಹಿತೆಯ 243(2)ನೇ ಪ್ರಕರಣದ ಮೇರೆಗೆ ಅಪೀಲುದಾರನ ವಾಸ್ತವಿಕ ಅರ್ಜಿಯ ನಿರಾಕರಣೆಯು ಯುಕ್ತವಲ್ಲವೆಂದು ಅಭಿಪ್ರಾಯಪಡಲಾಗಿದೆ.*

*ಅರ್ಜಿಯ ಆದೇಶವನ್ನು ಹೊರಡಿಸಲು ನ್ಯಾಯಾಲಯವು ಅಗತ್ಯ ಅಧಿಕಾರ ವ್ಯಾಪ್ತಿಯನ್ನು ಹೊಂದಿದ್ದರೆ, ಸರಿಯಾದ ವ್ಯವಸ್ಥೆಯನ್ನು ಸೂಚಿಸಿಲ್ಲದಿರುವುದು ಮತ್ತು ತಪ್ಪು ಉಪಬಂಧವನ್ನು ಸೂಚಿಸಿರುವುದು, ಯಾವುದಕ್ಕೂ ಸಂಬಂಧಪಡುವುದಿಲ್ಲವೆಂದು ಅಭಿಪ್ರಾಯಪಡಲಾಗಿದೆ."*

16(ಸಿ). ಮಾನ್ಯ ಸರ್ವೋಚ್ಚ ನ್ಯಾಯಾಲಯದ ಮುಂದಿರುವ ಸದರಿ ಪ್ರಕರಣದಲ್ಲಿ, ಆಪಾದಿತನು 293ನೇ ಪ್ರಕರಣದ ಮೇರೆಗೆ ಅರ್ಜಿಯನ್ನು ಸಲ್ಲಿಸಿದ್ದಾನೆ. ಆದರೆ, ಆಪಾದಿತನ ಸಹಿಯನ್ನು ನಿರ್ಧರಿಸುವುದಕ್ಕಾಗಿ, ವಿಧಿ ವಿಜ್ಞಾನ ಪ್ರಯೋಗಾಲಯದ ನಿರ್ದೇಶಕರು ಪರಿಶೀಲನೆಗಾಗಿ ಪ್ರಶ್ನಿತ ಚೆಕ್ಕನ್ನು ಕಳುಹಿಸಿದ್ದರು ಎಂಬುದು ಅರ್ಜಿಯ ವಾಸ್ತವಾಂಶವಾಗಿದೆ.

17. ಮೇಲಿನ ಸದರಿ ನಿರ್ಣಯಗಳ ಆಧಾರದ ಮೇಲೆ, ಅರ್ಜಿದಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು ಈ ಪ್ರಕರಣದಲ್ಲಿ ಅಧಿವಿಚಾರಣಾ ನ್ಯಾಯಾಲಯ ಹಾಗೂ ಮೊದಲ ಅಪೀಲು ನ್ಯಾಯಾಲಯವು ಮಾನ್ಯ ಮಾಡದಿರುವ ತಮ್ಮ ವಾದಗಳನ್ನು ರುಜುವಾತುಪಡಿಸಲು ನ್ಯಾಯಾಲಯಗಳು ಸಂಪೂರ್ಣ ಅವಕಾಶವನ್ನು ನೀಡಬೇಕೆಂದು ನಿವೇದಿಸಿದ್ದಾರೆ.

18. ಅರ್ಜಿದಾರಳ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು ಮಾಡಿದ ಮೇಲಿನ ಸದರಿ ನಿವೇದನೆಗಳಿಗೆ ಪ್ರತಿಯಾಗಿ ಎದುರುದಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು, ***ಎಸ್.ಬಿ. ಇಟ್ಟಿಗಿ ಮತ್ತು ಇನ್ನೊಬ್ಬರು –ವಿರುದ್ಧ– ಎಸ್.ವಿ. ಸುಲೋಚನಾ ಮತ್ತು ಇತರರು*** [4] ನಡುವಿನ ಈ ನ್ಯಾಯಾಲಯದ ನಿರ್ಣಯವನ್ನು ಸಹ ಆಧರಿಸಿದ್ದು, ಇದರಲ್ಲಿ, ಈ ನ್ಯಾಯಾಲಯವು, ಭಾರತೀಯ ಸಾಕ್ಷ್ಯ ಅಧಿನಿಯಮದ 73ನೇ ಪ್ರಕರಣದೊಂದಿಗೆ ವ್ಯವಹರಿಸಿದ್ದು, ಹೀಗೆ ಅಭಿಪ್ರಾಯಪಟ್ಟಿದೆ–

> *"ಒಪ್ಪಿಕೊಳ್ಳಲಾದ ಸಹಿಯೊಂದಿಗೆ ವಿವಾದಿತ ಸಹಿಯನ್ನು ಹೋಲಿಸುವ ಅಧಿಕಾರ ನ್ಯಾಯಾಲಯಕ್ಕಿರುತ್ತದೆ. ಸಹಿಗಳಿಗೆ ಸಂಬಂಧಿಸಿದಂತೆ ಚಿಕ್ಕ ಸಂದೇಹಗಳನ್ನು ತಾಳಿರುವಾಗ, ನ್ಯಾಯಾಲಯವು ಸಹಿಯನ್ನು ತಾಳೆ ನೋಡಲು*

4. ಐಎಲ್‌ಆರ್ 2007 ಕೆಎಆರ್ 247

*ಹಿಂಜರಿಯುತ್ತದೆ. ಅಷ್ಟೇ ಅಲ್ಲದೆ, ವಾದಿ ಮತ್ತು ಪ್ರತಿವಾದಿಗಳಿಬ್ಬರೂ, ಬರವಣಿಗೆ ತಜ್ಞರ ಅಭಿಪ್ರಾಯವನ್ನು ಪಡೆದುಕೊಳ್ಳಲು ಕ್ರಮಗಳನ್ನು ಕೈಗೊಂಡಿರಲಿಲ್ಲವೆಂದು ಅಭಿಪ್ರಾಯಪಟ್ಟಿದೆ. ಆ ಸನ್ನಿವೇಶಗಳ ಅಡಿಯಲ್ಲಿ ನ್ಯಾಯಾಲಯವು, ಭಾರತೀಯ ಸಾಕ್ಷ್ಯ ಅಧಿನಿಯಮ, 73ನೇ ಪ್ರಕರಣದ ಮೇರೆಗೆ ವಿವಾದಿತ ಸಹಿಯನ್ನು ಹೋಲಿಸಬೇಕು."*

18(ಎ). ***ಎಚ್.ಎಂ. ಸತೀಶ್ –ವಿರುದ್ಧ– ಬಿ.ಎನ್. ಅಶೋಕ್*** [5] ನಡುವಿನ ಮತ್ತೊಂದು ತೀರ್ಪಿನಲ್ಲಿ ಈ ನ್ಯಾಯಾಲಯವು, ಭಾರತೀಯ ಸಾಕ್ಷ್ಯ ಅಧಿನಿಯಮದ 45ನೇ ಪ್ರಕರಣದೊಂದಿಗೆ ವ್ಯವಹರಿಸುತ್ತಿರುವಾಗ, ಹೀಗೆ ಅಭಿಪ್ರಾಯಪಟ್ಟಿದೆ.

*"ಅರ್ಜಿಯನ್ನು ಪುರಸ್ಕರಿಸಿರುವ ದಂಡಾಧಿಕಾರಿಯವರ ಆದೇಶವನ್ನು ಬರವಣಿಗೆ ತಜ್ಞರ ಅಭಿಪ್ರಾಯಕ್ಕಾಗಿ ಚೆಕ್ಕನ್ನು ಕಳುಹಿಸುವುದು. ಚೆಕ್ಕನ್ನು ಪಡೆದುಕೊಂಡವರ ಸಹಿಯನ್ನು ನಿರಾಕರಿಸಿರುವ ಸಂದರ್ಭದಲ್ಲಿ, ಉತ್ತಮ ಸಾಕ್ಷಿದಾರನು, ಸಂಬಂಧಪಟ್ಟ ಬ್ಯಾಂಕಿನ ವ್ಯವಸ್ಥಾಪಕನಾಗಿರುತ್ತಾನೆ. ಆದರೆ ಬರವಣಿಗೆ ತಜ್ಞನಲ್ಲ. ಮಾನ್ಯ ದಂಡಾಧಿಕಾರಿಯವರು, ಅರ್ಜಿಯನ್ನು ಸ್ವೀಕರಿಸುವಾಗ, ದಾಖಲೆಯಲ್ಲಿರುವ ಸಂಗತಿಗಳನ್ನು ಮೌಲ್ಯಮಾಪನ ಮಾಡಿರುವುದಿಲ್ಲ. ಅರ್ಜಿಯು ತಿರಸ್ಕೃತಗೊಂಡಿದ್ದರೆ, ಆಪಾದಿತನು ತುಂಬಾ ತೊಂದರೆಯಲ್ಲಿ ಸಿಲುಕಿಕೊಳ್ಳುತ್ತಿದ್ದನು ಎನ್ನುವ ಆಧಾರದ ಮೇಲೆ ಏಕಮಾತ್ರವಾಗಿ ಅರ್ಜಿಯನ್ನು ಸ್ವೀಕರಿಸಲಾಗಿತ್ತು. ಪ್ರಶ್ನಿತ ಆದೇಶವನ್ನು ಕಾನೂನಿನಲ್ಲಿ ಸಮರ್ಥಿಸಲಾಗುವುದಿಲ್ಲ. ಹಾಗಾಗಿ ಸದರಿ ಅರ್ಜಿಯನ್ನು ನ್ಯಾಯಾಲಯವು, ತಿರಸ್ಕರಿಸಿದೆ.*

5. ಐಎಲ್‌ಆರ್ 2007 ಕೆಎಆರ್ 936

18(ಬಿ). ಎದುರುದಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು ಉದ್ಧರಿಸಲಾದ ***ಎನ್. ಮುನಿಸ್ವಾಮಿ ರೆಡ್ಡಿ –ವಿರುದ್ಧ– ಎಂ. ನಾರಾಯಣಸ್ವಾಮಿ*** [6] ನಡುವಿನ ರಲ್ಲಿ ವರದಿಯಾದ ಮತ್ತೊಂದು ತೀರ್ಪು, ನನ್ನ ಅಭಿಪ್ರಾಯದಲ್ಲಿ, ಸದರಿ ಪ್ರಕರಣದಲ್ಲಿ, ಸದರಿ ಚೆಕ್ಕಿನಲ್ಲಿ ಆಪಾದಿತನು ಸಹಿಯನ್ನು ಹಾಕಿದ್ದು, ಇದರ ಬಗ್ಗೆ ಅವನಿಗೆ ಒಪ್ಪಿಗೆಯಿತ್ತು ಎನ್ನುವ ಕಾರಣದಿಂದಾಗಿ, ಇದಕ್ಕೆ ಸಂಬಂಧಪಡುವುದಿಲ್ಲ. ಆಪಾದಿತನು ಬರೆದಿರುವ ಚೆಕ್ಕಿನ ಒಳಾಂಶಗಳಿಗೆ ಮಾತ್ರ ಈ ವಿವಾದವು ಸಂಬಂಧಪಡುತ್ತದೆ ಮತ್ತು ಆಪಾದಿತನ ಪ್ರಕಾರ, ಇದನ್ನು ತನ್ನ ಕೈಬರವಣಿಗೆಯಲ್ಲಿ ದೂರುದಾರನು ಭರ್ತಿ ಮಾಡಿದ್ದನು. ಆದುದರಿಂದ, ನ್ಯಾಯಾಲಯವು, ದೂರಿನಲ್ಲಿರುವ ಸಹಿಯನ್ನು ಆಪಾದಿತನು ಒಪ್ಪಿಕೊಂಡಿರುವನೆಂಬ ಆಧಾರದ ಮೇಲೆ ಸದರಿ ಅರ್ಜಿಯನ್ನು ವಜಾಗೊಳಿಸಿತ್ತು.

19. ಮೇಲಿನ ಸದರಿ ತೀರ್ಪುಗಳನ್ನು ಅವಗಾಹಿಸಿದ ನಂತರ, ವಿವಾದಿತ ಸಹಿಯನ್ನು ತಜ್ಞರಿಗೆ ಕಳಿಸುವುದಾಗಲಿ ಅಥವಾ ಭಾರತೀಯ ಸಾಕ್ಷ್ಯ ಅಧಿನಿಯಮದ 73ನೇ ಪ್ರಕರಣದ ಮೇರೆಗೆ ತನ್ನ ಮೂಲಕ ಸಹಿಯನ್ನು ತಾಳೆ ನೋಡಲು ಕಳುಹಿಸುವುದಾಗಲಿ ಅದು ಅಂತಿಮವಾಗಿ ನ್ಯಾಯಾಲಯದ ವಿವೇಚನೆಗೆ ಬಿಟ್ಟ ವಿಚಾರವೆಂಬುದು ಸ್ಪಷ್ಟವಾಗುತ್ತದೆ. ಆದರೆ, ಯಾವ ಸನ್ನಿವೇಶಗಳ ಅಡಿಯಲ್ಲಿ, ಆ ನಿರ್ದಿಷ್ಟ ಪ್ರಯೋಗವನ್ನು ಮಾಡಬಹುದಾದ, ನ್ಯಾಯಾಲಯುವು, ಅತೀ ಎಚ್ಚರಿಕೆಯಿಂದ ಪರೀಕ್ಷಿಸಬೇಕಾಗುತ್ತದೆಯೆಂಬುದು ಪ್ರಶ್ನೆಯಾಗಿದೆ. ಮೇಲಿನ ಸದರಿ ತೀರ್ಪುಗಳಲ್ಲಿ ಸ್ವಭಾವ ಸಿದ್ಧ ನ್ಯಾಯದ ತತ್ವಗಳನ್ನು ಮತ್ತು ಆಪಾದಿತನಿಗೆ ನೀಡಿದ ಅವಕಾಶವನ್ನು ಎತ್ತಿ ಹೇಳಲಾಗಿದೆ, ಅಷ್ಟೇ ಅಲ್ಲದೆ, ಯಾವ ಸಂದರ್ಭಗಳಲ್ಲಿ, ತಜ್ಞರ ಅಭಿಪ್ರಾಯಕ್ಕಾಗಿ ಚೆಕ್ಕನ್ನು ಕಳುಹಿಸಬಾರದು ಎಂಬುದನ್ನು ಮೇಲೆ ಉದ್ಧರಿಸಲಾದ ನಿರ್ಣಯಗಳಲ್ಲಿ ವಿವರಿಸಲಾಗಿದೆ. ಅಂತಿಮವಾಗಿ, ವಿವಾದಿತ ಚೆಕ್ಕನ್ನು ತಜ್ಞರ ಪರಿಶೀಲನೆಗಾಗಿ ಕಳುಹಿಸುವುದು ಅಗತ್ಯವಾಗಿದೆಯೇ ಎಂಬುದನ್ನು ನ್ಯಾಯಾಲಯಗಳು ಕಂಡು ಹಿಡಿಯಬೇಕು. ಇವೆಲ್ಲವೂ, ಪ್ರತಿಯೊಂದು

6. ಎಲ್‌ಎಡಬ್ಲ್ಯೂಎಸ್(ಕೆಎಆರ್) – 201–4–141

ಪ್ರಕರಣದ ಸಂಗತಿಗಳು ಮತ್ತು ಸನ್ನಿವೇಶಗಳನ್ನು ಅವಲಂಬಿಸಿರುತ್ತವೆ ಮತ್ತು ನ್ಯಾಯಾಲಯವು ನಿರ್ದಿಷ್ಟ ಯುಕ್ತಾಯುಕ್ತ ನ್ಯಾಯಿಕ ವಿವೇಚನೆಯನ್ನು ಬಳಸಬೇಕು. ಈ ಹಿನ್ನೆಲೆಯಲ್ಲಿ ಅಧಿವಿಚಾರಣಾ ನ್ಯಾಯಾಲಯ ಮತ್ತು ಮೊದಲ ಅಪೀಲು ನ್ಯಾಯಾಲಯವು ಅಂಥ ಯುಕ್ತ ನ್ಯಾಯಿಕ ವಿವೇಚನೆಯನ್ನು ಬಳಸಿವೆಯೇ ಎಂಬುದನ್ನು ನ್ಯಾಯಾಲಯವು ನೋಡಬೇಕು.

20. ಪ್ರಾಸಿಕ್ಯೂಷನ್ ತನ್ನ ವಾದವನ್ನು, ಸಮರ್ಪಕವಾಗಿ ಮಂಡಿಸುವ ಮೂಲಕ ಯುಕ್ತ ಸಂದೇಹವನ್ನು ಮೀರಿ ರುಜುವಾತುಪಡಿಸಬೇಕು ಎಂಬುದು ಮತ್ತು ನ್ಯಾಯಾಲಯದ ಮುಂದೆ ಸಾಕ್ಷ್ಯವನ್ನು ಮನವರಿಕೆ ಮಾಡಿಕೊಡುವುದು ಕ್ರಿಮಿನಲ್ ನ್ಯಾಯಶಾಸ್ತ್ರದ ಮೂಲಭೂತವಾದ ಮೂಲ ತತ್ವಗಳಾಗಿವೆ. ನ್ಯಾಯಾಲಯವು ಪ್ರಕ್ರಿಯಾತ್ಮಕ ಕಾನೂನುಗಳ ಮೇರೆಗೆ ಮಾನ್ಯ ಮಾಡಲಾದ ಪ್ರಕ್ರಿಯೆಯ ಸಹಾಯದೊಂದಿಗೆ ನ್ಯಾಯಾಲಯದ ಮುಂದೆ ಮಂಡಿಸಲಾದ ಅಂಥ ಸಾಕ್ಷ್ಯವನ್ನು ಮೌಲ್ಯಮಾಪನ ಮಾಡುವುದರ ಆಧಾರದ ಮೇಲೆ ಪಕ್ಷಕಾರರ ಹಕ್ಕುಗಳು ಮತ್ತು ಹೊಣೆಗಾರಿಕೆಗಳನ್ನು ನ್ಯಾಯ ನಿರ್ಣಯ ಮಾಡಬಹುದು. ನಿರ್ದಿಷ್ಟವಾಗಿ, ನ್ಯಾಯಾಲಯದ ಮುಂದೆ ಯಾವ ಸಂಗತಿಗಳನ್ನು, ನ್ಯಾಯಾಲಯವು ಸಂಬಂಧಪಟ್ಟ ಸಂಗತಿಗಳನ್ನು ಹೇಗೆ, ಹಾಜರುಪಡಿಸಲು ಅಥವಾ ಅಗತ್ಯಪಡಿಸಲು ಪಕ್ಷಕಾರರಿಗೆ ಅನುಮತಿಸಬಹುದು ಎಂಬುದನ್ನು ಭಾರತೀಯ ಸಾಕ್ಷ್ಯ ಅಧಿನಿಯಮವು ಒತ್ತಿಹೇಳುತ್ತದೆ. ಭಾರತೀಯ ಸಾಕ್ಷ್ಯ ಅಧಿನಿಯಮದ 45ನೇ ಪ್ರಕರಣದ ಮೇರೆಗೆ, ತಜ್ಞರ ಅಭಿಪ್ರಾಯದ ಸಮಂಜಸತೆಯು ಯಾವ ರೀತಿಯಲ್ಲಿ ಸಂಬಂಧಪಡುತ್ತದೆ ಎಂಬ ಬಗ್ಗೆ ಯಾವುದೇ ವಿವಾದವಿಲ್ಲ. ತಜ್ಞರ ಅಭಿಪ್ರಾಯವನ್ನು, ಸಂಬಂಧಪಟ್ಟ ಸಂಗತಿಯೆಂದು ಸರಿಯಾದ ರೀತಿಯಲ್ಲಿ ಗುರುತಿಸಲಾಗಿದ್ದು ಅಂಥ ಸಂಬಂಧಪಟ್ಟ ಸಂಗತಿಯ ಆಧಾರದ ಮೇಲೆ ಆಸಕ್ತಿದಾಯಕವಾದ ಸಂಬಂಧಪಟ್ಟ ಸಂಗತಿಯನ್ನು ರುಜುವಾತುಪಡಿಸುವ ಸಲುವಾಗಿ ನ್ಯಾಯಾಲಯದ ಮುಂದೆ ಸಾಕ್ಷ್ಯವನ್ನು ಪಕ್ಷಕಾರರು ಹಾಜರುಪಡಿಸಬಹುದಾಗಿದ್ದು, ನ್ಯಾಯಾಲಯವು, ವ್ಯವಹರಣೆಗಳಿಗೆ ಪಕ್ಷಕಾರರ ನಡುವಿನ ವಿವಾದದಲ್ಲಿನ ಸಂಗತಿಯನ್ನು ನ್ಯಾಯ ನಿರ್ಣಯ ಮಾಡಬಹುದು.

21. ವ್ಯಕ್ತಿಯು ತನ್ನ ಸಹಿಯನ್ನು ಅಥವಾ ಬೆರಳು ಮುದ್ರೆಯನ್ನು ಹಾಕಿರುವನೆಂದು ಹೇಳಲಾಗಿರುವ ವ್ಯಕ್ತಿಯು ಸಕಾರಾತ್ಮಕ ರೀತಿಯಲ್ಲಿ ನಿರಾಕರಿಸಿದರೆ, ಮತ್ತು ವಿವಾದಿತ ದಸ್ತಾವೇಜಿನಲ್ಲಿರುವ ಅಂಥ ಸಹಿ ಮತ್ತು ಗುರುತು ಅಸ್ಪಷ್ಟವಾಗಿದ್ದಲ್ಲಿ ಮತ್ತು ಚಿತ್ತುಗಳಾಗಿದ್ದಲ್ಲಿ ಅಥವಾ ಸ್ಪಷ್ಟವಾಗಿಲ್ಲದಿದ್ದಲ್ಲಿ, ಹೋಲಿಸುವುದು ಕಷ್ಟಕರವಾಗುತ್ತದೆ ಎಂಬುದನ್ನು ನ್ಯಾಯಾಲಯಗಳು ಮನಸ್ಸಿನಲ್ಲಿಟ್ಟುಕೊಳ್ಳಬೇಕು. ಒಪ್ಪಿಕೊಳ್ಳಲಾದ ಸಹಿಯೊಂದಿಗೆ ವಿವಾದಿತ ಸಹಿಗೆ ಸಂಬಂಧಿಸಿದಂತೆ ಕಣ್ಣಾರೆ ನೋಡುವುದನ್ನು ಆಧರಿಸಿದ ನಿರ್ಣಯವನ್ನು ಕೈಗೊಳ್ಳಲು ನ್ಯಾಯಾಧೀಶರು ಹಿಂಜರಿಯುತ್ತಾರೆ, ಅಷ್ಟೇ ಅಲ್ಲದೆ, ಅಂಥ ಹೋಲಿಕೆಯನ್ನು ತೆಗೆದುಕೊಳ್ಳಲು ನ್ಯಾಯಾಲಯವು ಒತ್ತಾಯಪಡಿಸಿದ ಪಕ್ಷದಲ್ಲಿ, ಆಗ ಮತ್ತು ಹೋಲಿಕೆ ಮಾಡಲಾದ ಸಹಿಯ ಗುಣಲಕ್ಷಣಗಳು, ಸಾದೃಶ್ಯಗಳು ಮತ್ತು ಅಸಾಮ್ಯತೆಗಳನ್ನು ದೃಢಪಡಿಸಲು ಮಾನ್ಯ ವಕೀಲರ ನೆರವಿನೊಂದಿಗೆ ಮತ್ತು ಭೂತ ಕನ್ನಡಿಯ ಸಹಾಯದಿಂದ ಅಮೂಲಾಗ್ರ ಅಧ್ಯಯನದ ಮೂಲಕ ಪರೀಕ್ಷಿಸಬೇಕು. ಅಗತ್ಯವಾಗಿ, ತೀರ್ಪು, ಕಾರಣಗಳನ್ನು ಒಳಗೊಂಡಿರಬೇಕು ಮತ್ತು ನ್ಯಾಯಾಲಯವು, ಅದರಲ್ಲಿ ನಿರ್ಣಯಗಳನ್ನು ದಾಖಲಿಸಲು ಆಯ್ಕೆ ಮಾಡಿಕೊಂಡಿದ್ದರೆ, ಸಹಿಯ ಹೋಲಿಕೆಯನ್ನು ಆಧರಿಸಿದ ಅಂಥ ನಿರ್ಣಯವನ್ನು ನೀಡಲು ಪ್ರಯತ್ನಗಳನ್ನು ಮಾಡಬೇಕು.

22. ಒಪ್ಪಿತ ಸಹಿಯೊಂದಿಗೆ ಸಹಿಯನ್ನು ಹೋಲಿಸುವುದಕ್ಕೆ ಸಂಬಂಧಿಸಿದಂತೆ ನ್ಯಾಯಾಧೀಶರು ತಾವೇ ಕಣ್ಣಾರೆ ನೋಡುವುದಕ್ಕೆ ಯಾವುದೇ ಕಾನೂನು ಪ್ರತಿಷೇದ ಇಲ್ಲದಿದ್ದರೂ, ಕೂಡ, ನ್ಯಾಯಾಲಯವು ಅತೀ ಎಚ್ಚರಿಕೆಯಿಂದಿರಬೇಕು, ಅಷ್ಟೇ ಅಲ್ಲದೆ, ಎಚ್ಚರಿಕೆಯ ವಿಷಯವಾದ ಕಾರಣದಿಂದ ವಿಪರೀತದ ಜಾಗರೂಕತೆಯನ್ನು ವಹಿಸಬೇಕಾಗುತ್ತದೆ. ಸಾಮಾನ್ಯವಾಗಿ ನ್ಯಾಯಾಲಯವು, ಒಪ್ಪಿತ ಸಹಿಯೊಂದಿಗೆ ವಿವಾದಿತ ಸಹಿಗಳನ್ನು ಹೋಲಿಕೆ ಮಾಡುವ ಜವಾಬ್ದಾರಿಗಳನ್ನು ತಾನೇ ತೆಗೆದುಕೊಳ್ಳಬೇಕು ಮತ್ತು ಏಕಮೇವ ರೀತಿಯಲ್ಲಿ ತಾನೇ ಮಾಡಿದ ಹೋಲಿಕೆಯಲ್ಲಿ ಸಹಿಯನ್ನು ಗುರುತಿಸುವುದಕ್ಕೆ ಸಂಬಂಧಿಸಿದಂತೆ ತನ್ನ ನಿರ್ಣಯಗಳನ್ನು ನೀಡಲು ಅನಿಶ್ಚಿಯತೆಯನ್ನು ತೋರಿಸಬೇಕು.

23. ಭಾರತೀಯ ಸಾಕ್ಷ್ಯ ಅಧಿನಿಯಮದ 73ನೇ ಪ್ರಕರಣದ ಮೇರೆಗಿನ ಅಧಿಕಾರವನ್ನು ದಂಡಾಧಿಕಾರಿಯವರು ಚಲಾಯಿಸಬಹುದು. ಭಾರತೀಯ ಸಾಕ್ಷ್ಯ ಅಧಿನಿಯಮದ 73ನೇ ಪ್ರಕರಣವನ್ನು ಸಾಮಾನ್ಯವಾಗಿ ಮತ್ತು ಸಾಧಾರಣವಾಗಿ, ನ್ಯಾಯಾಲಯವು ತಜ್ಞರು ನೀಡಿದ ಅಭಿಪ್ರಾಯದ ಸತ್ಯಾಸತ್ಯತೆಯನ್ನು ಪರೀಕ್ಷಿಸಲು ಅಥವಾ ಪ್ರಕ್ರಿಯಾತ್ಮಕ ಕಾನೂನುಗಳ ಮೇರೆಗೆ ನಮೂದಿಸಲಾದ ಯಾವುದೇ ವಿಧಾನದ ಮೂಲಕ ಮುಖ್ಯಾಂಶಗಳನ್ನು ಮಂಡಿಸಿದ ಇತರ ಸಾಕ್ಷ್ಯವನ್ನು ಪರಿಶೀಲಿಸಲು ಚಲಾಯಿಸಬಹುದು. ಸಹಿಗಳಲ್ಲಿ ಯಾವುದೇ ವ್ಯತ್ಯಾಸವಿದ್ದರೂ ಕೂಡ, ನ್ಯಾಯಾಲಯವು, ತಜ್ಞರ ಅಭಿಪ್ರಾಯವನ್ನು ದಾಖಲೆಯಲ್ಲಿ ಪಡೆದುಕೊಂಡ ಹೊರತು ಅದನ್ನು ಪರಿಶೀಲಿಸುವ ಧೈರ್ಯ ಮಾಡಬಾರದು. ಆದುದರಿಂದ, ನ್ಯಾಯಾಲಯವು, ಪ್ರತಿಯೊಂದು ಪ್ರಕರಣದ ಸಂಗತಿಗಳು ಮತ್ತು ಸನ್ನಿವೇಶಗಳನ್ನು ನೋಡಿಕೊಂಡು ಎಚ್ಚರಿಕೆಯಿಂದ ಕಾರ್ಯವನ್ನು ಎತ್ತಿಕೊಳ್ಳಬೇಕು ಮತ್ತು ಅಪರೂಪಕ್ಕೆ, ಭಾರತೀಯ ಸಾಕ್ಷ್ಯ ಅಧಿನಿಯಮದ 73ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಬೇಕು. ನೀಡಲಾದ ನಿರ್ದಿಷ್ಟ ಪ್ರಕರಣದಲ್ಲಿ ಆಪಾದಿತನು, ವಿವಾದಿತ ದಸ್ತಾವೇಜಿನಲ್ಲಿರುವ ತನ್ನ ಸಹಿ ಅಥವಾ ಬೆರಳಿನ ಗುರುತನ್ನು ನಿರ್ದಿಷ್ಟವಾಗಿ ಮತ್ತು ಪಟ್ಟುಬಿಡದೆ ನಿರಾಕರಿಸಿದ್ದಾನೆಂಬುದನ್ನು ಮತ್ತು ಅಂಥ ಸಹಿಯ ಪರಿಶೀಲನೆಯು ತಜ್ಞರ ಅಭಿಪ್ರಾಯವನ್ನು ಅಗತ್ಯಪಡಿಸುತ್ತದೆ ಎಂಬುದನ್ನು ರುಜುವಾತುಪಡಿಸಲು ನ್ಯಾಯಾಲಯದ ಮುಂದೆ ಕೆಲವು ಸಾಕ್ಷ್ಯಾಧಾರಗಳನ್ನು ಸಹ ಇಡಬೇಕು ಎಂಬುದನ್ನು ಹೇಳುವಾಗ, ಇದು ಯಾವಾಗಲೂ ಅಪಾಯಕಾರಿ ಮತ್ತು ಹಾನಿಕಾರಕವಾಗಿದೆಯೆಂದು ನಿಸ್ಸಂದೇಹವಾಗಿ ಹೇಳಬಹುದು.

24. ನ್ಯಾಯಾಲಯಗಳನ್ನು ತಜ್ಞರುಗಳ ತಜ್ಞನೆಂದು ಕರೆಯುವುದು ಸತ್ಯಾಂಶದಿಂದ ಕೂಡಿದೆ. ಆದರೆ ಅಂಥ ಪದಗಳನ್ನು ಬಳಸುವುದು, ನಿಜವಾದ ಅರ್ಥದಲ್ಲಿ, ನ್ಯಾಯಾಲಯವು ತಜ್ಞನನ್ನಾಗಿ ಮಾಡುವುದಿಲ್ಲ. ಆ ವಿಷಯದಲ್ಲಿ ಇದನ್ನು ಹೇಳಲಾಗಿದೆ, ಏಕೆಂದರೆ, ತಜ್ಞರ ಅಭಿಪ್ರಾಯದ ವಿವೇಚನೆಯ ನಂತರವೂ ಸಹ ನ್ಯಾಯಾಲಯದ ಅಭಿಪ್ರಾಯವು ನಿರ್ಣಾಯಕವಾಗಿರುತ್ತದೆ. ದಾಖಲೆಯಲ್ಲಿರುವ ಸಾಕ್ಷ್ಯಾಧಾರಗಳ ಆಧಾರದ ಮೇಲೆ ತಜ್ಞರ ಅಭಿಪ್ರಾಯವನ್ನು ವಿವೇಚಿಸುವ ಅಧಿಕಾರವನ್ನು ನ್ಯಾಯಾಲಯ

ಹೊಂದಿದ್ದು, ನಿರ್ಣಾಯಕವಾಗಿ ತನ್ನ ನಿರ್ಣಯವನ್ನು ನೀಡುತ್ತದೆ. ಇದಕ್ಕೆ ಪಕ್ಷಕಾರರು ಬದ್ಧರಾಗಿರುತ್ತಾರೆ. ತಜ್ಞರ ಅಭಿಪ್ರಾಯಕ್ಕಷ್ಟೇ ನ್ಯಾಯಾಲಯ ಬದ್ಧವಾಗಿರುವುದಿಲ್ಲ ಅಥವಾ ಪಕ್ಷಕಾರರೂ ಬದ್ಧರಾಗಿರುವುದಿಲ್ಲ. ಸಮರ್ಪಕ ಕಾರಣಗಳನ್ನು ನೀಡುವ ಮೂಲಕವೂ ಸಹ, ನ್ಯಾಯಾಲಯವು ತಜ್ಞರ ಅಭಿಪ್ರಾಯವನ್ನು ತಿರಸ್ಕರಿಸಬಹುದು. ದಾಖಲೆಯಲ್ಲಿರುವ ಎಲ್ಲಾ ಸಾಕ್ಷ್ಯಗಳ ಗುಣಾವಗುಣಗಳನ್ನು ವಿವೇಚಿಸಿದ ನಂತರ ನ್ಯಾಯಾಲಯದ ಅಭಿಪ್ರಾಯವು ಪಕ್ಷಕಾರರ ಹಕ್ಕುಗಳ ನ್ಯಾಯ ನಿರ್ಣಯದ ಆಧಾರ ಪೂರ್ವಕ ಉದ್ಘೋಷಣೆಯಾಗುತ್ತದೆ. ಆದುದರಿಂದ, ಈ ಸಂದರ್ಭದಲ್ಲಿ, ನ್ಯಾಯಾಲಯವನ್ನು ತಜ್ಞರುಗಳ ತಜ್ಞನೆಂದು ಗುರುತಿಸಲಾಗಿದೆ. ಆದರೆ, ತಜ್ಞರ ಕೆಲಸವನ್ನು ಮಾಡುವ ಸಲುವಾಗಿ ಯಾವಾಗಲೂ ತಜ್ಞರ ಶೂಗಳಲ್ಲಿ ಕಾಲು ತೂರಿಸುತ್ತದೆಯೆಂದು ಅದರ ಅರ್ಥವಲ್ಲ. ಆದುದರಿಂದ, ನ್ಯಾಯಾಲಯವು, ಹಾಗೆ ಮಾಡುತ್ತಿರುವಾಗ, 73ನೇ ಪ್ರಕರಣದ ಮೇರೆಗೆ ಸಹಿಗಳನ್ನು ಹೋಲಿಸಲು ಇದು ಅನಿವಾರ್ಯವಾಗಿದ್ದಾಗ, ನ್ಯಾಯಾಲಯವನ್ನು ಕಡೆಯ ಮಾರ್ಗವಾಗಿ ಮಾತ್ರ ತೆಗೆದುಕೊಳ್ಳಲಾಗುವುದು, ಮೇಲಿನ ಸದರಿ ಪ್ರಮುಖ ಆಯಾಮಗಳನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕು.

25. ಈ ಹಿನ್ನೆಲೆಯಲ್ಲಿ, ಅಧಿವಿಚಾರಣಾ ನ್ಯಾಯಾಲಯ ಅಥವಾ ಮೊದಲ ಅಪೀಲು ನ್ಯಾಯಾಲಯವು ಎಲ್ಲಾ ಜಾಗರೂಕತೆಗಳೊಂದಿಗೆ ಸಹಿಗಳನ್ನು ಹೋಲಿಕೆ ಮಾಡಿವೆಯೇ ಎಂಬುದನ್ನು ಮತ್ತು ತನ್ನ ಪ್ರತಿವಾದವನ್ನು ಸಾಬೀತು ಪಡಿಸಲು ಆಪಾದಿತಳಿಗೆ ಅವಕಾಶವನ್ನು ನಿರಾಕರಿಸಿರುವುದು ಯುಕ್ತವಾಗಿದೆಯೇ ಮತ್ತು ಸರಿಯಾಗಿದೆಯೇ ಎಂಬುದನ್ನು ನಾನು ಈಗ ಪರಿಗಣಿಸಬೇಕು.

26. ತನ್ನ ತೀರ್ಪಿನಲ್ಲಿ, ಅಧಿವಿಚಾರಣಾ ನ್ಯಾಯಾಲಯವು, ಆಪಾದಿತಳ ಸಹಿಗಳನ್ನು ಹೋಲಿಸುವಾಗ, ಈ ಆಯಾಮವನ್ನು ಪರಿಗಣಿಸಿದೆ ಮತ್ತು ಪ್ರಾಸಾ.2 ಆಗಿ ಪರಿಶೀಲಿಸಿರುವ ಗೋವಾ ರಾಜ್ಯ ಸಹಕಾರಿ ಬ್ಯಾಂಕಿನ ವ್ಯವಸ್ಥಾಪಕರು, ಚೆಕ್ಕನ್ನು ಯಾರ ಹೆಸರಿಗೆ ಬರೆಯಲಾಗಿದೆಯೋ ಅವಳ ಸಹಿಯನ್ನು ತಾಳೆ ಮಾಡಿಲ್ಲವೆನ್ನುವ ಕಾರಣಕ್ಕಾಗಿ ಚೆಕ್ಕನ್ನು ನಿರಾಕರಿಸಿಲ್ಲವೆಂದು ತಿಳಿಸಿರುವುದನ್ನು

ಗಮನಿಸಲಾಗಿದೆ. ಆದರೆ, ಇದನ್ನು 'ಸಾಕಷ್ಟು ಹಣ ಇಲ್ಲದ' ಕಾರಣದಿಂದ ಚೆಕ್ಕನ್ನು ನಿರಾಕರಿಸಲಾಗಿತ್ತು ಎಂಬುದನ್ನು ನಿರ್ದಿಷ್ಟವಾಗಿ ತಿಳಿಸಲಾಗಿದೆ. ನಿಶಾನೆ ಡಿ.12 ಆಪಾದಿತಳ ಸಹಿಯನ್ನು ಹೊಂದಿದ್ದು, ನ್ಯಾಯಾಲಯದ ಮುಂದೆ ಸಲ್ಲಿಸಲಾದ ವಕಾಲತ್ತಾಗಿದೆಯೆಂಬುದನ್ನು ಸಹ ನ್ಯಾಯಾಲಯ ತಿಳಿಸಿದ್ದು, ನಿಶಾನೆ ಪಿ.1 ಮತ್ತು ನಿಶಾನೆ ಡಿ.12ರಲ್ಲಿ ಕಂಡು ಬಂದ ಸಹಿಯನ್ನು ಹೋಲಿಸಲಾಗಿದೆ ಮತ್ತು ಆಪಾದಿತಳ ಹೇಳಿಕೆಯಲ್ಲಿ ಸಹ ಮತ್ತು ಅವಳ 313ನೇ ಹೇಳಿಕೆಯಲ್ಲಿ ಸಹ ಹೋಲಿಕೆ ಮಾಡಲಾಗಿದ್ದು, ಇದಾದ ನಂತರ ಒಂದು ಸಾಲಿನಲ್ಲಿ, 'ಈ ಎಲ್ಲಾ ದಸ್ತಾವೇಜುಗಳಲ್ಲಿ ಆಪಾದಿತಳ ಸಹಿಯು ಏಕರೂಪವಾಗಿರುವುದು ಕಂಡು ಬರುತ್ತದೆ,' ಎಂದು ತಿಳಿಸಲಾಗಿದೆ. ಆದುದರಿಂದ, ಆಪಾದಿತಳು ತನ್ನ ಪ್ರತಿವಾದವನ್ನು ರುಜುವಾತುಪಡಿಸಲು ಮತ್ತು ದೂರುದಾರನ ಸಾಕ್ಷ್ಯವನ್ನು ಸಾಬೀತುಪಡಿಸಲು ವಿಫಲಳಾಗಿದ್ದಾಳೆ ಎಂಬುದು ನ್ಯಾಯಾಲಯದ ಅಭಿಪ್ರಾಯವಾಗಿದೆ.

27. ದೂರುದಾರನು ಆ ಚೆಕ್ಕುಗಳನ್ನು ಕಳ್ಳತನ ಮಾಡಿ, ಅವುಗಳನ್ನು ದುರುಪಯೋಗಪಡಿಸಿಕೊಂಡಿದ್ದಾನೆಂಬುದನ್ನು ಆಪಾದಿತರು ಸಾಬೀತುಪಡಿಸಿಲ್ಲವೆಂದು ಹೇಳಿದರೂ ಕೂಡ, ಒಂದು ವಾಕ್ಯವನ್ನು ಹೊರತುಪಡಿಸಿ, ನ್ಯಾಯಾಲಯವು, ಯಾವ ರೀತಿಯಲ್ಲಿ ಸಹಿಗಳು ಒಂದೇ ರೀತಿಯಾಗಿವೆಯೆಂಬ ನಿರ್ಣಯಕ್ಕೆ ಬಂದಿದೆಯೆಂಬ ಕುರಿತು ನಿರ್ದಿಷ್ಟವಾಗಿ ಸೂಚಿಸಿಲ್ಲ. ಒಪ್ಪಿತ ಸಹಿ ಮತ್ತು ವಿವಾದಿತ ಸಹಿಯ ನಡುವೆ ನ್ಯಾಯಾಲಯಕ್ಕೆ ಕಂಡು ಬಂದಿರುವ ಸಾಮ್ಯತೆಗಳಾವುವು. ತುಂಬಾ ಅನೌಪಚಾರಿಕ ರೀತಿಯಲ್ಲಿ, ಸಹಿಯನ್ನು ಸಾದಾ ಆಗಿ ಕಣ್ಣು ಹಾಯಿಸಿದ ನಂತರ ನ್ಯಾಯಾಲಯವು ಅಂಥ ನಿರ್ಣಯಕ್ಕೆ ಬಂದಿರುತ್ತದೆ. ಹಾಗೆಯೇ, ಮೊದಲ ಅಪೀಲು ನ್ಯಾಯಾಲಯವು, ಅಧಿವಿಚಾರಣಾ ನ್ಯಾಯಾಲಯ ಮಾಡಿದ ಪರಿಶೀಲನೆಯನ್ನು ಮರು ವಿವೇಚಿಸುವ ಯಾವುದೇ ಶ್ರಮವನ್ನು ತೆಗೆದುಕೊಂಡಿರುವುದಿಲ್ಲ. ಅಧಿವಿಚಾರಣಾ ನ್ಯಾಯಾಲಯವು, ಆ ಒಪ್ಪಿತ ಸಹಿಗಳೊಂದಿಗೆ ವಿವಾದಿತ ಸಹಿಗಳನ್ನು ಹೋಲಿಕೆ ಮಾಡಿ ನೋಡುವ ಅಧಿಕಾರವನ್ನು ಹೊಂದಿರುತ್ತದೆಂದು ಅಧಿವಿಚಾರಣಾ ನ್ಯಾಯಾಲಯವು ಕಾನೂನಿಗನುಸಾರವಾಗಿ ಅದನ್ನು ಮಾಡಿದೆಯೆಂದು ಅಪೀಲು ನ್ಯಾಯಾಲಯವು ಅಭಿಪ್ರಾಯಪಟ್ಟಿದ್ದು, ಆದುದರಿಂದ, ಅಧಿವಿಚಾರಣಾ ನ್ಯಾಯಾಲಯದ

ಕಾರ್ಯವು, ಯಾವುದೇ ಹಸ್ತಕ್ಷೇಪವನ್ನು ಕೋರುವುದಿಲ್ಲ. ಮೊದಲ ಅಪೀಲು ನ್ಯಾಯಾಲಯವು, ಸಹಿಯನ್ನು ತಾಳೆ ನೋಡುವ ಅದರಲ್ಲೂ ನಿರ್ದಿಷ್ಟವಾಗಿ, ಬರಿಗಣ್ಣಿನಿಂದ ಸಹಿಗಳನ್ನು ನೋಡುವ ಮೂಲಕ ಮೊದಲ ನೋಟಕ್ಕೆ ಕಾಣಬಹುದಾದ ಸಹಿಗಳಲ್ಲಿರುವ ಸಾಮ್ಯತೆಗಳನ್ನು ಅಥವಾ ಅಸಾದೃಶ್ಯತೆಗಳನ್ನು ಸೂಚಿಸುವ ಎಚ್ಚರಿಕೆಯನ್ನು ತೆಗೆದುಕೊಂಡಿಲ್ಲ.

28. ಈ ಹಿನ್ನೆಲೆಯಲ್ಲಿ, ***ತಿರುವೇಂಗಡ ಪಿಳ್ಳೆ –ವಿರುದ್ಧ– ನವನೀತಮ್ಮಾಳ್ ಮತ್ತು ಇನ್ನೊಬ್ಬರು*** [7] ನಿರ್ಣಯದಲ್ಲಿ, ಇದನ್ನು ಇಲ್ಲಿ ಗಮನಿಸುವುದು ಯುಕ್ತವಾಗಿದ್ದು, ಇದರಲ್ಲಿ ಸರ್ವೋಚ್ಛ ನ್ಯಾಯಾಲಯವು ಹೀಗೆ ಅಭಿಪ್ರಾಯಪಟ್ಟಿದೆ:

> *"ಎರಡೂ ಹೆಬ್ಬೆರಳ ಗುರುತುಗಳ ಹೋಲಿಕೆಯು ಅನೌಪಚಾರಿಕವಾಗಲು ಸಾಧ್ಯವಿಲ್ಲ ಅಥವಾ ಕಣ್ಣೋಟದ ಮೂಲಕವಷ್ಟೆ ನೋಡುವಂಥದಲ್ಲ. ಅಷ್ಟೇ ಅಲ್ಲದೆ, ಏನೂ ಇಲ್ಲದೆ ಒಪ್ಪಿತ ಹೆಬ್ಬೆರಳ ಗುರುತು ಮತ್ತು ವಿವಾದಿತ ಹೆಬ್ಬೆರಳ ಗುರುತುಗಳ ನಡುವೆ ವ್ಯತ್ಯಾಸಗಳನ್ನು ಗುರುತಿಸದಿರುವುದು ಕಂಡು ಬಂದಿದೆಯೆನ್ನುವ ತೀರ್ಪಿನ ನಿರ್ಣಯವನ್ನು, ವಿವಾದಿತ ಹೆಬ್ಬೆರಳ ಗುರುತು ಒಪ್ಪಿತ ಹೆಬ್ಬೆರಳ ಗುರುತನ್ನು ಹಾಕಿರುವ ವ್ಯಕ್ತಿಯದೇ ಆಗಿದೆಯೆಂಬುದು ಸಿಂಧುವಾದ ನಿರ್ಣಯವೆಂದು ಒಪ್ಪಿಕೊಳ್ಳಲು ಸಾಧ್ಯವಿಲ್ಲ. ವಿವಾದಿತ ಬೆರಳ ಗುರುತು ಮತ್ತು ಒಪ್ಪಿತ ಬೆರಳ ಗುರುತು ಸ್ಪಷ್ಟವಾಗಿದೆಯೆಂದು ನ್ಯಾಯಾಲಯವು ಗುರುತಿಸಿದ್ದಲ್ಲಿ, ನ್ಯಾಯಾಲಯುವು, ಬೆರಳ ಮುದ್ರೆಗಳ ಲಕ್ಷಣಗಳನ್ನು ಗುರುತಿಸುವ ಸ್ಥಾನದಲ್ಲಿದ್ದು, ನ್ಯಾಯಾಲಯವು, ತಜ್ಞರ ಅಭಿಪ್ರಾಯವಿಲ್ಲದೆಯೂ ಸಹ ಹೋಲಿಕೆಯ ಆಧಾರದ ಮೇಲೆ ನಿರ್ಣಯವನ್ನು ದಾಖಲಿಸಬಹುದು. ಆದರೆ, ನ್ಯಾಯಾಲಯವು, ವಿವಾದಿತ ಬೆರಳು/ಹೆಬ್ಬೆರಳ ಗುರುತು ಅಸ್ಪಷ್ಟವಾಗಿದೆ,*

7. ಎಐಆರ್ 2008 ಎಸ್‌ಸಿ 1541

*ಅಸ್ಫುಟವಾಗಿದೆ ಅಥವಾ ತುಂಬಾ ಸೂಕ್ಷ್ಮವಾಗಿದೆಯೆಂದು ಗುರುತಿಸಿದಲ್ಲಿ ನ್ಯಾಯಾಲಯವು, ಅನೌಪಚಾರಿಕ ಅವಗಾಹನೆ ಮೂಲಕ ಊಹೆ ಮಾಡುವ ಅಪಾಯವನ್ನುಂಟುಬಾರದು."*

29. ಮೇಲಿನ ಸದರಿ ನಿರ್ಣಯಗಳನ್ನು ದೃಷ್ಟಿಯಲ್ಲಿಟ್ಟುಕೊಂಡು, ಅಧಿವಿಚಾರಣಾ ನ್ಯಾಯಾಲಯ ಅಥವಾ ಅಪೀಲು ನ್ಯಾಯಾಲಯವು, ಒಪ್ಪಿತ ಸಹಿಗಳು ಮತ್ತು ವಿವಾದಿತ ಸಹಿಗಳ ನಡುವೆ ಗುರುತು ಮಾಡಲಾದ ವ್ಯತ್ಯಾಸಗಳನ್ನು ಅಥವಾ ಆ ಸಹಿಗಳ ನಡುವಿನ ಸಾಮ್ಯತೆಗಳನ್ನು ತೋರಿಸುವ ಗುರುತು ಮಾಡಲಾದ ಗುಣಲಕ್ಷಣಗಳನ್ನು ಬೇರ್ಪಡಿಸದ, ಅಂಥ ಸಹಿಯ ಕೊಂಚ ಕಣ್ಣಾಡಿಸಿದ ಪರಿಶೀಲನೆಯನ್ನು ಮತ್ತು ಆ ಸಹಿಗಳು ಸದೃಶವಾಗಿ ಕಂಡು ಬಂದಿವೆಯೆಂದು ನೀಡಿರುವ ನಿರ್ಣಯವನ್ನು ನ್ಯಾಯಾಲಯವು ಸಿಂಧುವಾದ ಹೋಲಿಕೆಯೆಂದು ಒಪ್ಪಿಕೊಳ್ಳಲಾಗುವುದಿಲ್ಲ. ಆದುದರಿಂದ, ಭಾರತೀಯ ಸಾಕ್ಷ್ಯ ಅಧಿನಿಯಮದ 73ನೇ ಪ್ರಕರಣದ ಮೇರೆಗೆ ಅವುಗಳನ್ನು ಹೋಲಿಸುವಾಗ, ಪಕ್ಷಕಾರರ ಸಹಿಗಳನ್ನು ವಿವೇಚಿಸುವಾಗ, ನ್ಯಾಯಾಲಯಗಳು, ಸಾಮ್ಯತೆ ಕಂಡು ಬರುವ ಒಪ್ಪಿತ ಮತ್ತು ವಿವಾದಿತ ಸಹಿಗಳಾಗಿರುವ ಸಹಿಗಳಲ್ಲಿ ಯಾವ ಗುಣಲಕ್ಷಣಗಳಿವೆ ಎಂಬುದನ್ನು ಸ್ಪಷ್ಟಪಡಿಸಲು ಭೂತಕನ್ನಡಿಯನ್ನು ಬಳಸುವ ಮೂಲಕ ತುಂಬಾ ಎಚ್ಚರಿಕೆಯಿಂದಿರಬೇಕು. ಆಗ ಮಾತ್ರ, ತಜ್ಞರ ಅಭಿಪ್ರಾಯವಿಲ್ಲದಿದ್ದರೂ ನ್ಯಾಯಾಲಯವು, ದಾಖಲೆಯಲ್ಲಿರುವ ಇತರ ಸಾಕ್ಷ್ಯದ ಆಧಾರದ ಮೇಲೆ ಅಂಥ ಹಸ್ತಕ್ಷೇಪವನ್ನು ಮಾಡಬಹುದು. ಅಂಥ ಪ್ರಮುಖ ಆಯಾಮಗಳು, ಅಧಿವಿಚಾರಣಾ ನ್ಯಾಯಾಲಯ ಮತ್ತು ಮೊದಲ ಅಪೀಲು ನ್ಯಾಯಾಲಯಕ್ಕೆ ಸಂಬಂಧಪಡುವಷ್ಟರ ಮಟ್ಟಿಗೆ ಈ ಪ್ರಕರಣದಲ್ಲಿ ಎದ್ದು ಕಾಣುವಷ್ಟು ನಾಪತ್ತೆಯಾಗಿವೆ.

30. ಈ ಪ್ರಕರಣದಲ್ಲಿ ಸಂಗತಿಗಳ ವಿವೇಚನೆಯನ್ನು ಪ್ರಸ್ತಾವಿಸುವ ಮೊದಲು, ಯಾವ ಸನ್ನಿವೇಶಗಳಲ್ಲಿ ನ್ಯಾಯಾಲಯವು, ತಜ್ಞರ ಅಭಿಪ್ರಾಯಕ್ಕಾಗಿ ವಿವಾದಿತ ಸಹಿಗಳನ್ನು ಕಳುಹಿಸಲು ಆಪಾದಿತನ ಅಂಥ ಕೋರಿಕೆಯನ್ನು ತಿರಸ್ಕರಿಸುತ್ತದೆ ಎಂಬ ಬಗ್ಗೆ ಲಕ್ಷ್ಯ ಕೊಡುವುದು ಸಹ ಅಗತ್ಯವಾಗಿದೆ. ಪಕ್ಷಕಾರರು ಒದಗಿಸಲಾದ ಸಾಕ್ಷಿಯಲ್ಲಿ, ಸಾಕಷ್ಟು ಮನವರಿಕೆಯಾಗಿದೆಯೆಂದು ಅಭಿಪ್ರಾಯಪಟ್ಟಾಗ ಮತ್ತು

ವಿವಾದಿತ ದಸ್ತಾವೇಜಿನಲ್ಲಿ ಅವನ ಸಹಿಗೆ ಸಂಬಂಧಿಸಿದಂತೆ ಆಪಾದಿತನ ಒಪ್ಪಿಗೆಯನ್ನು ತೋರಿಸುವ ನಿರ್ಣಾಯಕ ಸಾಕ್ಷ್ಯಾಧಾರಗಳಿವೆಯೆಂಬುದು ಅಪಾರ ಸಂಖ್ಯೆಯ ತೀರ್ಪುಗಳಿಂದ ಸ್ಪಷ್ಟವಾಗುತ್ತದೆ. ಆಪಾದಿತರು ವ್ಯವಹರಣೆಗಳನ್ನು ಎಳೆಯಲು ಎಲ್ಲಾ ತೆರನಾದ ವಿಳಂಬ ತಂತ್ರಗಳನ್ನು ಮಾಡಿರುವನೆಂದು ರುಜುವಾತಾದಾಗ ಮತ್ತು ಯಾವುದೇ ಇತರ ಕಾರಣಕ್ಕಾಗಿ ಅಥವಾ ಪ್ರತಿವಾದವು ತುಂಬಾ ಸಾಂದರ್ಭಿಕವಾಗಿದ್ದಾಗ ಮತ್ತು ಆಧಾರ ರಹಿತವಾಗಿದ್ದಾಗ ಮತ್ತು ಅವನ ಸಹಿಯ ನಿರ್ಧಾರಣೆಗೆ ಸಂಬಂಧಿಸಿದಂತೆ ನ್ಯಾಯಾಲಯವು ಅನುಮಾನವನ್ನು ವ್ಯಕ್ತಪಡಿಸಬಹುದಾಗಿದ್ದಲ್ಲಿ, ಇದನ್ನೂ ಸಹ ಗಮನಿಸಬೇಕು. ಅಂಥ ಸನ್ನಿವೇಶಗಳಲ್ಲಿ, ನ್ಯಾಯಿಕ ವಿವೇಚನೆಯನ್ನು ಚಲಾಯಿಸುವ ಮೂಲಕ ನ್ಯಾಯಾಲಯವು, ಆಪಾದಿತನ ಮನವಿಗೆ ಸಮ್ಮತಿಸಲು ನಿರಾಕರಿಸಬಹುದು, ಇಲ್ಲದಿದ್ದರೆ, ಸಾಮಾನ್ಯವಾಗಿ ಸ್ವಭಾವಸಿದ್ಧ ನ್ಯಾಯದ ತತ್ವಗಳಿಗೆ ಅಂಟಿಕೊಂಡು ನ್ಯಾಯಾಲಯವು, ತಜ್ಞರುಗಳಿಗೆ ವಿವಾದಿತ ಸಹಿಗಳನ್ನು ಕಳುಹಿಸುವುದಕ್ಕೆ ಸಂಬಂಧಿಸಿದ ಅಂಥ ಮನವಿಯನ್ನು ಯಾವಾಗಲೂ ಸಮ್ಮತಿಸುತ್ತಾ ಕೂರಬೇಕು.

31. ಈಗ ಈ ಪ್ರಕರಣದ ವಾಸ್ತವಿಕ ಸಂಗತಿಗಳಿಗೆ ಬರುವುದಾದರೆ, ವಾದವನ್ನು ಕೈಗೆತ್ತಿಕೊಳ್ಳಲು ಪ್ರಾರಂಭಿಸಿದಾಗಿನಿಂದ ಆಪಾದಿತಳು, ಚೆಕ್ಕಿನಲ್ಲಿ ಕಂಡು ಬಂದ ಸಹಿಯು ತನಗೆ ಸಂಬಂಧಪಟ್ಟಿಲ್ಲವೆಂದು ಮತ್ತು ಚೆಕ್ಕುಗಳನ್ನು ದೂರುದಾರನು ಕದ್ದಿರುವನೆಂದು ಮತ್ತು ಚೆಕ್ಕುಗಳು ದುರುಪಯೋಗವಾಗಿವೆಯೆಂದು ತಮ್ಮ ವಾದವನ್ನು ಮಂಡಿಸಿದ್ದಾರೆ. ಚೆಕ್ಕುಗಳು ಕಳ್ಳತನವಾಗಿರುವುದಕ್ಕೆ ಸಂಬಂಧಿಸಿದಂತೆ ಅಧಿವಿಚಾರಣಾ ನ್ಯಾಯಾಲಯವು, ಗಮನಿಸಿದಂತೆ, ಸಾಕಷ್ಟು ಸಾಕ್ಷ್ಯಾಧಾರಗಳನ್ನು ಮುಂದಿಟ್ಟಿಲ್ಲದಿದ್ದರೂ ಆದರೆ, ಚೆಕ್ಕುಗಳ ಮೇಲಿರುವ ಸಹಿ ಆಪಾದಿತಳದೇ ಎಂಬುದನ್ನು ರುಜುವಾತು ಪಡಿಸುವುದರಿಂದ ದೂರುದಾರನನ್ನು ಇದು ಮುಕ್ತಗೊಳಿಸುವುದಿಲ್ಲ. ನ್ಯಾಯಾಲಯವು, ಪಕ್ಷಕಾರರ ನಡುವೆ ಸಿವಿಲ್ ವಿಷಯದ ವ್ಯವಹರಣೆಗಳು ನಡೆಸುತ್ತಿಲ್ಲ. ಕ್ರಿಮಿನಲ್ ಪ್ರಕರಣದಲ್ಲಿ, ಯುಕ್ತ ಸಂದೇಹಗಳನ್ನು ಮೀರಿದ ಆಪಾದಿತಳ ವಿರುದ್ಧದ ಪ್ರಕರಣವನ್ನು ಪ್ರಾಸಿಕ್ಯೂಷನ್ನು ರುಜುವಾತುಪಡಿಸಬೇಕಾಗುತ್ತದೆಯೆಂಬುದು ಕಾನೂನಿನ ಸುಪರಿಚಿತ ಅಗಾಧ ಕಾನೂನು ತತ್ವವಾಗಿದೆ. ಮತ್ತೊಂದು ಕಡೆಯಲ್ಲಿ ಆಪಾದಿತಳು ತೆಗೆದುಕೊಂಡ ಪ್ರತಿವಾದವನ್ನು

ಸಾಧ್ಯತೆಗಳನ್ನು ಹೆಚ್ಚಿಸುವ ಮೂಲಕ ರುಜುವಾತುಪಡಿಸಬಹುದಾಗಿದೆ. ಆಪಾದಿತಳ ವಿರುದ್ಧ ತೀರ್ಮಾನ ತೆಗೆದುಕೊಳ್ಳುವ ಸಲುವಾಗಿ, ನ್ಯಾಯಾಲಯಗಳ ತೀರ್ಪುಗಳು ನಿಶ್ಚಿತವಾಗಿರಬೇಕು ಮತ್ತು ಸ್ವರೂಪದಲ್ಲಿ ನಿರ್ಣಾಯಕವಾಗಿರಬೇಕು. ಆದುದರಿಂದ, ನ್ಯಾಯಾಲಯವು, ಆಪಾದಿತಳು ತೆಗೆದುಕೊಂಡ ನಿಲುವನ್ನು ತುಂಬಾ ಎಚ್ಚರಿಕೆಯಿಂದ ಗಮನಿಸಬೇಕು.

32. ನಿಶಾನೆ ಡಿ.5 ರಿಂದ ಡಿ.8ರಲ್ಲಿ ಗುರುತು ಮಾಡಲಾಗಿರುವ ನ್ಯಾಯಾಲಯದ ಮುಂದೆ ಹಾಜರುಪಡಿಸಲಾದ ದಾಖಲೆಗಳು, ಪ್ರಸ್ತುತ ದೂರನ್ನು 31.07.2008 ರಂದು ದಾಖಲಿಸಲಾಗಿತ್ತೆಂಬುದನ್ನು, ನ್ಯಾಯಾಲಯವು ಸಂಜ್ಞೇಯತೆಗೆ ತೆಗೆದುಕೊಂಡಿತ್ತೆಂಬುದನ್ನು ಮತ್ತು ದಿನಾಂಕ 4.08.2008 ರಂದು ದೂರುದಾರನ ಪ್ರತಿಜ್ಞಾ ಹೇಳಿಕೆಯನ್ನು ದಾಖಲಿಸಿದ ನಂತರ ಆಪಾದಿತಳಿಗೆ ಸಮನುಗಳನ್ನು ಹೊರಡಿಸಲು ಆದೇಶಿಸಲಾಯಿತೆಂಬುದನ್ನು ಬಹಿರಂಗಪಡಿಸುತ್ತವೆ. ದಿನಾಂಕ 11.9.2008 ರಂದು, ಆಪಾದಿತಳು ನ್ಯಾಯಾಲಯದ ಮುಂದೆ ಹಾಜರಾಗಿದ್ದಾಳೆ. ನ್ಯಾಯಾಲಯದ ಮುಂದೆ ಹಾಜರುಪಡಿಸಲಾಗುತ್ತಿರುವ ಸದರಿ ಚೆಕ್ಕಿನ ಬಗ್ಗೆ ಅರಿವಿಗೆ ಬಂದ ಕೂಡಲೇ, ಅದರ ಮೇಲೆ ದೂರನ್ನು ದಾಖಲಿಸಿದ್ದು, ಸದರಿ ಚೆಕ್ಕಿನಲ್ಲಿರುವ ಸಹಿಗಳನ್ನು ಸುಳ್ಳು ಸೃಷ್ಟಿ ಮಾಡಲಾಗಿದೆಯೆಂಬುದು ಅವಳಿಗೆ ತಿಳಿದು ಬಂದಿದೆ. ಆದುದರಿಂದ ಆಕೆ ನ್ಯಾಯಿಕ ದಂಡಾಧಿಕಾರಿಗಳು, ಬಿಚೊಲಿಮ್ ಗೋವಾದ ಕಡತದಲ್ಲಿ ಸಂಕೀರ್ಣ ಸಂ.71/2008 ರಲ್ಲಿ ದೂರನ್ನು ದಾಖಲಿಸಿದ್ದಾಳೆ. ನಿಶಾನೆ ಡಿ.5, ನಿಶಾನೆ ಡಿ.10ರ ಪ್ರಕಾರ ದೂರುದಾರಳು 27.11.2008 ರಂದು ಸದರಿ ನ್ಯಾಯಿಕ ದಂಡಾಧಿಕಾರಿಯವರ ಮುಂದೆ ದೂರನ್ನು ದಾಖಲಿಸಿದ್ದಳೆಂಬುದು ಎಂದರೆ ಆಪಾದಿತಳೂ ಅಧಿವಿಚಾರಣಾ ನ್ಯಾಯಾಲಯದ ಮುಂದೆ ಹಾಜರಾದ ಕೂಡಲೇ ಎರಡು ತಿಂಗಳುಗಳಲ್ಲಿ ದೂರನ್ನು ದಾಖಲಿಸಿದ್ದಳೆಂಬುದನ್ನು ದಾಖಲೆಗಳು ಬಹಿರಂಗಪಡಿಸುತ್ತವೆ.

33. ಬಿಚೊಲಿಮ್ ಗೋವಾದ ಮಾನ್ಯ ಜೆಎಂಎಫ್‌ಸಿ ಇವರು, ದೂರಿನ ಅಂಶಗಳನ್ನು ಪರಿಶೀಲಿಸಿದ ನಂತರ, ಸದರಿ ಕ್ರಿಮಿನಲ್ ಸಂಕೀರ್ಣ ಸಂ.71/2008 ರಲ್ಲಿ 17.6.2009 ರಂದು ತನಿಖೆಗೆ ಆದೇಶಿಸಿದ್ದಾರೆ. ತದನಂತರ ಆಪಾದಿತಳು,

ಅಧಿವಿಚಾರಣಾ ನ್ಯಾಯಾಲಯದ ಮುಂದೆ, ಗೋವಾ ಅಧಿಕಾರ ವ್ಯಾಪ್ತಿ ನ್ಯಾಯಾಲಯದ ಮುಂದೆ ಕ್ರಿಮಿನಲ್ ಪ್ರಕರಣವು ದಾಖಲಾಗಿದೆಯೆಂದು, ಇದರಲ್ಲಿನ, ಆಪಾದಿತನು, ಚೆಕ್ಕುಗಳನ್ನು ಕಳ್ಳತನ ಮಾಡಿರುವನೆಂದು, ಸುಳ್ಳು ಸಹಿ ಸೃಷ್ಟಿ ಮಾಡಲಾಗಿದೆಯೆಂದು ಮತ್ತು ದೂರುದಾರನು ದುರುಪಯೋಗಪಡಿಸಿಕೊಂಡಿರುವನು ಎಂಬ ವಾದವನ್ನು ಈ ಪ್ರಕರಣದಲ್ಲಿ ಕೈಗೆತ್ತಿಕೊಂಡಿರುವನೆಂಬ ಆಧಾರದ ಮೇಲೆ ಮುಂದಿನ ವ್ಯವಹರಣೆಗಳನ್ನು ನಿಲ್ಲಿಸಲು ಕೋರಿ ದಂಡ ಪ್ರಕ್ರಿಯಾ ಸಂಹಿತೆಯ 258ನೇ ಪ್ರಕರಣದ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಿದ್ದಳು. ಗೋವಾ ಬಿಚೋಲಿಮ್ ಪೊಲೀಸರು, ತನಿಖೆಯ ಸಂಬಂಧ ಪೊಲೀಸರಿಗೆ ಸದರಿ ಚೆಕ್ಕನ್ನು ಹಸ್ತಾಂತರಿಸಲು ಅಧಿವಿಚಾರಣಾ ನ್ಯಾಯಾಲಯಕ್ಕೆ ಮನವಿ ಮಾಡಿದ್ದರು ಎಂಬುದು ದಾಖಲೆಗಳಿಂದ ಕಂಡು ಬರುತ್ತದೆ. ಆದಾಗ್ಯೂ, ಅಧಿವಿಚಾರಣಾ ನ್ಯಾಯಾಲಯವು 28.1.2009 ರಂದು ಇದನ್ನು ವಜಾಗೊಳಿಸಿತ್ತು. ಆಪಾದಿತಳು ಚೆಕ್ಕಿನ ಕಳ್ಳತನವಾಗಿರುವುದಕ್ಕೆ ಮತ್ತು ಸದರಿ ಚೆಕ್ಕುಗಳ ಮೇಲಿರುವ ಸುಳ್ಳು ಸಹಿ ಸೃಷ್ಟಿಗೆ ಸಂಬಂಧಪಟ್ಟಂತೆ ಅನೌಪಚಾರಿಕ ರೀತಿಯಲ್ಲಿ ಪ್ರತಿವಾದವನ್ನು ಕೈಗೆತ್ತಿಕೊಂಡಿರಲಿಲ್ಲವೆಂಬುದನ್ನು ಅವನು ಸಮುಚಿತ ನ್ಯಾಯಾಲಯದ ಮುಂದೆ ದೂರನ್ನು ದಾಖಲಿಸುವ ಕ್ರಮವನ್ನು ಕೈಗೊಂಡಿರುವನೆಂಬುದನ್ನು ಈ ದಸ್ತಾವೇಜುಗಳು, ಸ್ಪಷ್ಟವಾಗಿ ಬಹಿರಂಗಪಡಿಸುತ್ತಿವೆ. ಸದರಿ ಗೋವಾ ಪೊಲೀಸರು, ಸದರಿ ಪ್ರಕರಣವನ್ನು ಇನ್ನೂ ತನಿಖೆ ಮಾಡಬೇಕಾಗಿದೆಯೆಂದು ಮತ್ತು ಸದರಿ ಪ್ರಕರಣವು ಇನ್ನೂ ಇತ್ಯರ್ಥದಲ್ಲಿದೆಯೆಂಬುದನ್ನು ತೋರಿಸುತ್ತಿದ್ದು, ಮೊದಲ ಅಪೀಲು ನ್ಯಾಯಾಲಯದ ಮುಂದೆ ಮತ್ತು ಈ ನ್ಯಾಯಾಲಯದ ಮುಂದೆ ಮನವಿ ಮಾಡಿದ್ದರೂ ಸಹ ದಾಖಲೆಗಳನ್ನು ಬಹಿರಂಗಗೊಳಿಸಿರುವುದರಿಂದ ಸದರಿ ಪ್ರಕರಣವು ಇನ್ನೂ ಇತ್ಯರ್ಥದಲ್ಲಿದೆ. ಆದುದರಿಂದ ಆಪಾದಿತ ಪ್ರತಿವಾದವು ದಾಖಲೆಯಲ್ಲಿರುವ ಯಾವುದೇ ಸಾಕ್ಷ್ಯಾಧಾರಗಳನ್ನು ಕಳೆದುಕೊಂಡಿದೆಯೆಂದು ಹೇಳಲಾಗುವುದಿಲ್ಲ.

34. ಪಕ್ಷಕಾರರು ನೀಡಿದ ಮೌಖಿಕ ಸಾಕ್ಷ್ಯಾಧಾರಗಳ ಕಡೆಗೆ ಕೊಂಚ ಕಣ್ಣಾಡಿಸೋಣ. ಪ್ರಾಸಾ.1ರ ಪಾಟಿ ಸವಾಲಿನಲ್ಲಿ, ದೂರುದಾರ ಮತ್ತು ಆಪಾದಿತರು ಹತ್ತಿರದ ಸಂಬಂಧಿಕರಾಗಿರುವ ಕಾರಣದಿಂದ ಸದರಿ ಚೆಕ್ಕುಗಳನ್ನು ಕಳ್ಳತನ ಮಾಡಲಾಗಿತ್ತೆಂದು ಸೂಚಿಸಲಾಗಿದ್ದು, ನಿರ್ದಿಷ್ಟವಾಗಿ ನಿಶಾನೆ ಪಿ1(ಎ)ನಲ್ಲಿ ಗುರುತು

ಮಾಡಲಾದ ನಿಶಾನೆ ಪಿ.1ರಲ್ಲಿ ಕಂಡು ಬಂದ ಸಹಿಯು, ಆಪಾದಿತಳ ಸಹಿಯಾಗಿರುವುದಿಲ್ಲವೆಂದು ಮತ್ತು ಸದರಿ ಚೆಕ್ಕನ್ನು ದೂರುದಾರನು ದುರುಪಯೋಗ ಪಡಿಸಿಕೊಂಡಿರುವನೆಂದು ಸೂಚಿಸಲಾಗಿದೆ. ಇದರ ಕ್ರಮದ ಅವಧಿಯಲ್ಲಿ ಆಪಾದಿತಳು ಸುಸಂಗತವಾಗಿ ಸದರಿ ನಿಲುವನ್ನು ತಳೆದಿದ್ದರೂ, ಅವನ ಸಾಕ್ಷ್ಯವನ್ನು ಪ್ರತಿವಾದಿ ಸಾಕ್ಷ್ಯ.1 ಎಂದು ನ್ಯಾಯಾಲಯದ ಮುಂದೆ ಆಕೆಯನ್ನು ವಿಚಾರಣೆಗೊಳಪಡಿಸಲಾಗಿದೆ. ಸದರಿ ಚೆಕ್ಕುಗಳು ಕಳ್ಳತನವಾಗಿವೆಯೆಂದು ಮತ್ತು ಅವುಗಳ ಮೇಲೆ ಸುಳ್ಳು ಸಹಿ ಸೃಷ್ಟಿ ಮಾಡಲಾಗಿದೆಯೆಂದು ಮತ್ತು ಆಪಾದಿತನು ಅವುಗಳನ್ನು ದುರುಪಯೋಗಪಡಿಸಿಕೊಂಡಿರುವನೆಂದು ಗೋವಾದ ಬಿಚೋಲಿಮ್, ಜೆಎಂಎಫ್‌ಸಿ ಮುಂದೆ ವ್ಯವಹರಣೆಗಳ ಪ್ರಮಾಣೀಕೃತ ಪ್ರತಿಯನ್ನು ಹಾಜರುಪಡಿಸುವ ಮೂಲಕ ಇದನ್ನು ಇದರಲ್ಲಿ ನೇರವಾಗಿ ತಿಳಿಸಲಾಗಿದೆ.

35. ಆಪಾದಿತಳು ಖಾತೆಯನ್ನು ಹೊಂದಿರುವ ಬಿಚೋಲಿಮ್ ಶಾಖೆಯ, 'ಗೋವಾ ರಾಜ್ಯ ಸಹಕಾರಿ ಬ್ಯಾಂಕ್'ನ ವ್ಯವಸ್ಥಾಪಕರಾದ ಪ್ರಾಸಾ.2 ರತ್ನಕಾಂತ್‌ರವರು, ದೂರುದಾರನ ವಿನಂತಿಯ ಮೇರೆಗೆ ನ್ಯಾಯಾಲಯದ ಮುಂದೆ ಹಾಜರಾಗಿದ್ದಾರೆ ಮತ್ತು ವಾಸ್ತವವಾಗಿ, ಅವರು ತನ್ನ ಸಾಕ್ಷ್ಯದಲ್ಲಿ, ಆಪಾದಿತಳು ತಮ್ಮ ಶಾಖೆಯಲ್ಲಿ ಉಳಿತಾಯ ಬ್ಯಾಂಕು ಖಾತೆಯನ್ನು ಹೊಂದಿದ್ದು, ನಿಶಾನೆ ಪಿ.1 ಆಪಾದಿತಳು ನೀಡಿದ ಚೆಕ್ಕಾಗಿರುತ್ತದೆಯೆಂದು ತಿಳಿಸಿದ್ದಾನೆ. ಆದರೆ, ನಿಶಾನೆ ಪಿ.1ರಲ್ಲಿ ಕಂಡು ಬಂದ ನಿಶಾನೆ ಪಿ.1(ಎ)ರಲ್ಲಿರುವ ಸಹಿಯು, ಆಪಾದಿತಳ ಸಹಿಯಲ್ಲವೆಂದು ಸಾಕ್ಷ್ಯದಲ್ಲಿ ನಿರ್ದಿಷ್ಟವಾಗಿ ತಿಳಿಸಲಾಗಿದೆ. ಸಹಜವಾಗಿ ಇದು ಸಾಕ್ಷ್ಯದಲ್ಲಿರುವ ಪ್ರತ್ಯೇಕಿತ ವಾಕ್ಯವಾಗಿದ್ದು, ಈ ಸಾಕ್ಷಿದಾರನ ಸಾಕ್ಷ್ಯದಲ್ಲಿರುವ ಯಾವುದೇ ಇತರ ತಾರ್ಕಿಕ ಸಾಕ್ಷ್ಯಾಧಾರಗಳನ್ನು ಆಧರಿಸಿರುವುದಿಲ್ಲ. ಅಷ್ಟೇ ಅಲ್ಲದೆ, ಅವನು, ಹಣ ಸಾಕಷ್ಟು ಇಲ್ಲದ ಕಾರಣದಿಂದ ಮಾತ್ರ ಚೆಕ್ಕನ್ನು ನಿರಾಕರಿಸಲಾಗಿತ್ತೆಂದು ಮತ್ತು ಯಾವುದೇ ಇತರ ಕಾರಣಕ್ಕಾಗಿ ನಿರಾಕರಿಸಿಲ್ಲವೆಂದು ತಿಳಿಸಿದ್ದಾರೆ ಮತ್ತು ಅವರು 10 ಚೆಕ್ಕು ಹಾಳೆಗಳು, ಮೊದಲಾದವನ್ನು ಒಳಗೊಂಡಿರುವ ಆಪಾದಿತಳ ಚೆಕ್ಕು ಪುಸ್ತಕ ನಿಶಾನೆ ಡಿ.1ನ್ನು ಸಹ ನೋಡಿದ್ದಾರೆ. ಈ ಸಾಕ್ಷಿದಾರನು, ಬ್ಯಾಂಕಿನಲ್ಲಿರುವ ಮಾದರಿ ಸಹಿಯಿರುವ ಆಪಾದಿತಳ ಸಹಿಯ ಹೋಲಿಕೆಯ ಬಗ್ಗೆ ಸ್ಪಷ್ಟವಾಗಿ ಏನನ್ನೂ ತಿಳಿಸಿಲ್ಲ. ದೂರುದಾರನಾಗಲಿ ಅಥವಾ ಆಪಾದಿತಳಾಗಲಿ, ಆಪಾದಿತಳ

ಸಹಿಯನ್ನು ಗುರುತಿಸುವ ಉದ್ದೇಶಕ್ಕಾಗಿ ಬ್ಯಾಂಕಿನಿಂದ ಮಾದರಿ ಸಹಿಯನ್ನು ಪಡೆದುಕೊಳ್ಳುವ ಯಾವುದೇ ಕ್ರಮವನ್ನು ಕೈಗೊಂಡಿಲ್ಲ. ನಿಶಾನೆ ಪಿ.1ರ ಮತ್ತು ನ್ಯಾಯಾಲಯದ ಮುಂದೆ ಅವನ ಕಡೆಯಿಂದ ಪ್ರಾಸಾ.2ನ್ನು ದೂರುದಾರನು, ತನ್ನನ್ನೇ ವಿಚಾರಣೆಗೊಳಪಡಿಸಿದಾಗ, ನ್ಯಾಯಾಲಯದ ಮುಂದೆ ದೂರುದಾರನು ಇಟ್ಟಿರುವ ಉತ್ತಮ ಸಾಕ್ಷ್ಯವಾಗಿರುವ ಸಹಿಯೊಂದಿಗೆ ಆ ಸಹಿಗಳನ್ನು ಹೋಲಿಕೆ ಮಾಡುವ ಸಲುವಾಗಿ ಈ ಸಂಬಂಧದಲ್ಲಿ ನ್ಯಾಯಾಲಯವು ಸಹ ಯಾವುದೇ ಆಸಕ್ತಿಯನ್ನು ತೋರಿಸಿಲ್ಲ. ಆದುದರಿಂದ, ನಿಶಾನೆ ಪಿ.1ರಲ್ಲಿರುವ ಆಪಾದಿತನ ಸಹಿಗೆ ಸಂಬಂಧಪಟ್ಟಂತೆ ಸಂದೇಹವನ್ನು ಮುಂದುವರಿಸಲಾಗಿದೆ.

36. ಭಾರತೀಯ ಸಾಕ್ಷ್ಯ ಅಧಿನಿಯಮದ 45ನೇ ಪ್ರಕರಣದ ಮೇರೆಗೆ ಯಾವುದೇ ಅರ್ಜಿಯನ್ನು ಸಲ್ಲಿಸುವ ಮೂಲಕ ಅಧಿವಿಚಾರಣಾ ನ್ಯಾಯಾಲಯದ ಮುಂದೆ ಆಪಾದಿತಳು ಯಾವುದೇ ಕ್ರಮಗಳನ್ನು ಯಾಕೆ ಕೈಗೊಂಡಿಲ್ಲ ಎಂಬ ಬಗ್ಗೆ ಸಂದೇಹ ಉಂಟಾಗುತ್ತದೆ. ಇದೆಲ್ಲವೂ ಆಪಾದಿತಳನ್ನು ಪ್ರತಿನಿಧಿಸುವ ಅವಳ ಕಾನೂನು ಪ್ರತಿನಿಧಿ ಮತ್ತು ವಕೀಲನು, ಆಪಾದಿತಳಿಗೆ ನೀಡಿದ ಸಲಹೆಯನ್ನು ಅವಲಂಬಿಸಿರುತ್ತದೆ. ವಕೀಲರುಗಳು ನ್ಯಾಯಾಲಯದ ಮುಂದೆ ಕಾನೂನು ವ್ಯವಹರಣೆಗಳಲ್ಲಿ ತುಂಬಾ ನಿಷ್ಣಾತರಾಗಿರುವರು, ಈ ಕಾರಣದಿಂದ ಪಕ್ಷಕಾರರು ನುರಿತವರಾಗಿರುವುದಿಲ್ಲ. ಆದುದರಿಂದ ತಜ್ಞರುಗಳಿಂದ ಸದರಿ ಚೆಕ್ಕಿನ ಪರಿಶೀಲನೆ ಮಾಡಿ ಅದನ್ನು ಹಿಂತಿರುಗಿಸುವುದಷ್ಟೇ ನ್ಯಾಯಾಲಯಕ್ಕೆ ಸಾಕೆಂದು, ತನಿಖೆಗಾಗಿ ಸದರಿ ಚೆಕ್ಕನ್ನು ಹಿಂದಿರುಗಿಸಲು ಬಿಚೊಲಿಮ್ ಗೋವಾದ ಪೊಲೀಸರು, ಕೋರಿರುವಾಗ, ಆ ಸೋಗಿನ ಅಡಿಯಲ್ಲಿ ಅವನು ಅಧಿವಿಚಾರಣಾ ನ್ಯಾಯಾಲಯದ ಮುಂದೆ ಭಾರತೀಯ ಸಾಕ್ಷ್ಯ ಅಧಿನಿಯಮದ 45ನೇ ಪ್ರಕರಣದ ಮೇರೆಗೆ ಯಾವುದೇ ಅರ್ಜಿಯನ್ನು ಸಲ್ಲಿಸಬಹುದಾಗಿರಲಿಲ್ಲವೆಂದು ಆಪಾದಿತ ಅರ್ಜಿದಾರಳು ಭಾವಿಸಿರಬಹುದು. ಹಾಗಿದ್ದರೂ, ಭಾರತೀಯ ಸಾಕ್ಷ್ಯ ಅಧಿನಿಯಮದ 73ನೇ ಪ್ರಕರಣದ ಮೇರೆಗೆ ಸಹಿಗಳನ್ನು ಹೋಲಿಸುವಲ್ಲಿ ನ್ಯಾಯಾಲಯದ ಕಾರ್ಯವನ್ನು ಬಲಪಡಿಸುವ ಸಲುವಾಗಿ, ಮೇಲೆ ವಿವರಿಸಲಾದಂತೆ ಇತರ ಕಾನೂನು ಪ್ರಕ್ರಿಯೆಗಳನ್ನು ಅನುಸರಿಸುವಲ್ಲಿ ಇತರ ಒಪ್ಪಿತ ಆ ಸಹಿಗಳೊಂದಿಗೆ ಆಪಾದಿತಳ ಸಹಿಯನ್ನು ಹೋಲಿಸುವಾಗ ನ್ಯಾಯಾಲಯದ ಜವಾಬ್ದಾರಿಯನ್ನು ಇದು ಮುಕ್ತಗೊಳಿಸುವುದಿಲ್ಲ.

37. ಕ್ರಿಮಿನಲ್ ಪ್ರಕರಣದಲ್ಲಿ ಆಪಾದಿತನು ಪ್ರಕರಣದ ಪ್ರತಿಯೊಂದು ಹಂತದಲ್ಲಿ ಅವಕಾಶ ಹೊಂದಲು ಹಕ್ಕುಳ್ಳವನಾಗಿರುವನು ಏಕೆಂದರೆ, ನ್ಯಾಯಾಲಯವು ಮಾಡಿರಬಹುದಾದ ಅಪರಾಧ ನಿರ್ಣಯವು ಜೈಲಿಗೆ ಆಪಾದಿತನನ್ನು ಕಳುಹಿಸುವಲ್ಲಿ ಮುಕ್ತಾಯವಾಗಬಹುದು. ಅಂಥ ಸಂಭವನೀಯ ಸಂದರ್ಭದಲ್ಲಿ ನ್ಯಾಯಾಲಯವು ಸೆರೆಮನೆಯಲ್ಲಿ ಅವನಿಗೆ ಶಿಕ್ಷೆ ವಿಧಿಸುವ ಮೂಲಕ ವ್ಯಕ್ತಿಯ ಸಾಂವಿಧಾನಿಕ ಸ್ವಾತಂತ್ರ್ಯವನ್ನು ಕಸಿದುಕೊಳ್ಳಬಹುದು ಎಂಬ ಕಾನೂನು ಮೂಲಭೂತ ಮೂಲತತ್ವವಾಗಿದೆ. ಆದುದರಿಂದ, ಕ್ರಿಮಿನಲ್ ನ್ಯಾಯಶಾಸ್ತ್ರವು, ಇದು ಅಧಿವಿಚಾರಣಾ ನ್ಯಾಯಾಲಯದ ಮುಂದಿರಲಿ ಅಥವಾ ಅಪೀಲು ನ್ಯಾಯಾಲಯಗಳ ಮುಂದಿರಲಿ ಅಥವಾ ಪುನರ್ ಪರಿಶೀಲನಾ ನ್ಯಾಯಾಲಯದ ಮುಂದಿರಲಿ ಅಥವಾ ಸರ್ವೋಚ್ಚ ನ್ಯಾಯಾಲಯದ ಮುಂದಿರಲಿ ಈ ಬಗ್ಗೆ ಆಪಾದಿತನಿಗೆ ಅಧಿವಿಚಾರಣೆಯುದ್ದಕ್ಕೂ ನ್ಯಾಯ ಸಮ್ಮತ ಅವಕಾಶವನ್ನು ಗುರ್ತಿಸಿದೆ. ಕೆಲವು ನಿರ್ಣಯಗಳಲ್ಲಿ ಸರ್ವೋಚ್ಚ ನ್ಯಾಯಾಲಯವು, ಭಾರತೀಯ ಸಾಕ್ಷ್ಯ ಅಧಿನಿಯಮದ 45ನೇ ಪ್ರಕರಣದ ಮೇರೆಗೆ ಅರ್ಜಿಯನ್ನು ಪುರಸ್ಕರಿಸಿ, ಹೊಸ ವಿಲೇವಾರಿಗಾಗಿ ಅಧಿವಿಚಾರಣಾ ನ್ಯಾಯಾಲಯಕ್ಕೆ ವಿಷಯವನ್ನು ಒಪ್ಪಿಸಿದೆ. ಆದುದರಿಂದ, ಯಾವುದೇ ಹಂತದಲ್ಲಿ, ಆಪಾದಿತನಿಗೆ ಅವಕಾಶವನ್ನು ನೀಡುವ ಸಂಬಂಧ ಕಾರಣವನ್ನು ಅರಿತುಕೊಂಡರೆ, ವಾಸ್ತವಿಕ ಮತ್ತು ಗಣನಾರ್ಹ ನ್ಯಾಯವನ್ನು ಒದಗಿಸುವ ಸಲುವಾಗಿ ಅಂಥ ಅವಕಾಶವನ್ನು ಅವನಿಗೆ ನಿರಾಕರಿಸಬಾರದು ಎಂಬುದನ್ನು ಹೇಳುವುದು ವ್ಯರ್ಥವಾಗುತ್ತದೆ.

38. ಆಪಾದಿತನು ಕೋರಿಕೊಂಡಿದ್ದರೂ ಕೂಡ ಇದು ತುಂಬಾ ಸಮಯವನ್ನು ಹಿಡಿಯುತ್ತದೆ ಮತ್ತು ಅಧಿವಿಚಾರಣೆಯಲ್ಲಿ ವಿಳಂಬವಾಗುತ್ತದೆ ಎಂಬ ಕಾರಣದ ಆಧಾರದ ಮೇಲೆ ತಜ್ಞರಿಗೆ ವಿವಾದಿತ ಸಹಿಗಳನ್ನು ನ್ಯಾಯಾಧೀಶರು ಕಳುಹಿಸಿರುವುದಿಲ್ಲ. ಇದಕ್ಕೆ ಆಪಾದಿತನು ಜವಾಬ್ದಾರನಾಗಿರುವುದಿಲ್ಲ. ಅಂಥ ವಿಳಂಬದಿಂದಲೇ, ಸ್ವಭಾವಸಿದ್ಧ ನ್ಯಾಯದ ತತ್ವವನ್ನು ಉಪೇಕ್ಷಿಸಲು ಇದಷ್ಟೇ ಸಾಕಾಗುವುದಿಲ್ಲ.

39. ಮೇಲಿನ ಸದರಿ ಸಂಗತಿಗಳು ಮತ್ತು ಸನ್ನಿವೇಶಗಳನ್ನು ಮತ್ತು ದಾಖಲೆಯಲ್ಲಿರುವ ಸಾಕ್ಷ್ಯವನ್ನು ಸಹ ನೋಡಿಕೊಂಡು ಅಪೀಲು ನ್ಯಾಯಾಲಯವು ಈ ಸಾಕ್ಷ್ಯಾಧಾರಗಳನ್ನು ತಿಳುವಳಿಕೆಗೆ ತೆಗೆದುಕೊಂಡಿದ್ದು, ದಾಖಲೆಯಲ್ಲಿರುವ

ಸಾಕ್ಷ್ಯಾಧಾರಗಳನ್ನು ಯುಕ್ತವಾಗಿ, ವಿವೇಚಿಸಿದ್ದು, ಆಪಾದಿತಳ ಕಡೆಯಿಂದ ಸಣ್ಣಪುಟ್ಟ ಲೋಪಗಳೇನೇ ಇದ್ದರೂ ಅವನ ಪ್ರತಿವಾದವನ್ನು ರುಜುವಾತು ಪಡಿಸಲು ಆಪಾದಿತಳಿಗೆ ಸಾಕಷ್ಟು ಅವಕಾಶವನ್ನು ನೀಡುವ ಮೂಲಕ ಆಪಾದಿತಳಿಗೆ ನಿಷ್ಪಕ್ಷಪಾತ ಅಧಿವಿಚಾರಣೆಯನ್ನು ಮಾಡಲು ಅವಕಾಶ ಒದಗಿಸಿ ಭಾರತೀಯ ಸಾಕ್ಷ್ಯ ಅಧಿನಿಯಮದ 45ನೇ ಪ್ರಕರಣದ ಮೇರೆಗೆ ಅರ್ಜಿಯನ್ನು ಪುರಸ್ಕರಿಸುವ ಮೂಲಕ ಆಪಾದಿತಳಿಗೆ ಅವಕಾಶವನ್ನು ಒದಗಿಸಿದೆ. ಚೆಕ್ಕಿನಲ್ಲಿರುವ ಸಹಿಯು ಸಂದೇಹಾಸ್ಪದವಾಗಿದ್ದರೆ ಆಗ, ನ್ಯಾಯಾಲಯಗಳು, ಚೆಕ್ಕನ್ನು ತಜ್ಞರ ಅಭಿಪ್ರಾಯಕ್ಕೆ ಕಳುಹಿಸಲು ಆಪಾದಿತಳ ಮನವಿಗೆ ಸಾಮಾನ್ಯವಾಗಿ ಸಮ್ಮತಿಯನ್ನು ನೀಡಬೇಕು.

40. ಮೇಲಿನ ಪ್ರಕರಣದ ಸದರಿ ಸಂಗತಿಗಳು ಮತ್ತು ಸನ್ನಿವೇಶಗಳ ಆಧಾರದ ಮೇಲೆ ನಿರ್ದಿಷ್ಟವಾಗಿ ಈ ಪ್ರಕರಣಕ್ಕೆ ಸಂಬಂಧಪಡುವಷ್ಟರಮಟ್ಟಿಗೆ, ನನ್ನ ಅಭಿಪ್ರಾಯದಲ್ಲಿ, ನಿಶಾನೆ ಪಿ.1ರಲ್ಲಿ ಸಹಿಯನ್ನು ಸಂದೇಹಿಸುವ ಸಾಕಷ್ಟು ಸಾಕ್ಷ್ಯಾಧಾರಗಳನ್ನು ಮುಂದಿಟ್ಟಿದ್ದಾಳೆ. ಉದ್ದಕ್ಕೂ ಅಂಥ ಸಂದೇಹವನ್ನು ವ್ಯಕ್ತಪಡಿಸುವಾಗ ಮತ್ತು ದೂರನ್ನು ಸಲ್ಲಿಸುವ ಮೂಲಕ ತನ್ನನ್ನು ಒಡ್ಡಿಕೊಂಡು ಸಮುಚಿತ ಕ್ರಮವನ್ನು ತೆಗೆದುಕೊಂಡಿರುತ್ತಾರೆ ಮತ್ತು ಆ ಸಂದೇಹವನ್ನು ವ್ಯಕ್ತಪಡಿಸುವ ಪ್ರಾಸಿಕ್ಯೂಷನ್ ಸಾಕ್ಷಿದಾರರ ಸಾಕ್ಷ್ಯ ಮತ್ತು ಒದಗಿಸಿದ ಸಾಕ್ಷ್ಯದ ವ್ಯವಹರಣೆ ನಡೆಯುವ ಅವಧಿಯಲ್ಲಿ ಆ ಪ್ರತಿವಾದವನ್ನು ತೆಗೆದುಕೊಂಡಿದ್ದು, ಅಪೀಲು ನ್ಯಾಯಾಲಯವು, ನಿಶ್ಚಿತವಾಗಿ ಈ ಎಲ್ಲಾ ಆಯಾಮಗಳನ್ನು ಪರಿಗಣಿಸಿ, ಸದರಿ ಅರ್ಜಿಯನ್ನು ಪುರಸ್ಕರಿಸಲೇಬೇಕಾಗುತ್ತದೆ. ಮೊದಲ ಅಪೀಲು ನ್ಯಾಯಾಲಯವು, ಮೇಲಿನ ಎಲ್ಲಾ ಮುಖ್ಯ ಸಂಗತಿಗಳನ್ನು ಪರಿಗಣಿಸದೆ ಮತ್ತು ಕ್ರಿಮಿನಲ್ ಪ್ರಕರಣದಲ್ಲಿ ತನ್ನನ್ನು ಸಮರ್ಥಿಸಿಕೊಳ್ಳಲು ಆಪಾದಿತಳಿಗೆ ಸಂಪೂರ್ಣ ಅವಕಾಶವನ್ನು ನೀಡುವ ಮೂಲಕ ಸ್ವಭಾವ ಸಿದ್ಧ ನ್ಯಾಯದ ತತ್ವಗಳಿಗೂ ಕೂಡ ಅಂಟಿಕೊಳ್ಳದೆ, ಭಾರತೀಯ ಸಾಕ್ಷ್ಯ ಅಧಿನಿಯಮದ 45ನೇ ಪ್ರಕರಣದ ಮೇರೆಗೆ ಅರ್ಜಿಯನ್ನು ವಜಾಗೊಳಿಸಿ ಗಂಭೀರ ಲೋಪವೆಸಗಿದೆಯೆಂಬುದು ನನ್ನ ಅಭಿಪ್ರಾಯವಾಗಿದೆ. ಹೀಗಾಗಿ, ಅಧಿವಿಚಾರಣಾ ನ್ಯಾಯಾಲಯ ಹಾಗೂ ಮೊದಲ ಅಪೀಲು ನ್ಯಾಯಾಲಯದ ತೀರ್ಪನ್ನು ತಳ್ಳಿ ಹಾಕುವುದಕ್ಕೆ ಅರ್ಹವಾಗಿವೆ. ಆಪಾದಿತಳು, ವ್ಯವಹರಣೆಗಳನ್ನು ಲಂಬಿಸಲು ನ್ಯಾಯಾಲಯದ ವಿವೇಚನೆಯನ್ನು ಉದ್ದೇಶಪೂರ್ವಕವಾಗಿ ದುರ್ಬಳಕೆ

ಮಾಡಿಕೊಂಡಿರುವಳು ಎಂದು ನ್ಯಾಯಾಲಯವು ಅಭಿಪ್ರಾಯಪಟ್ಟರೆ ಎರಡೂ ಪಕ್ಷಕಾರರಿಗೆ ಸಂಪೂರ್ಣ ಅವಕಾಶವನ್ನು ನೀಡುವುದಕ್ಕೆ ಅಧಿವಿಚಾರಣಾ ನ್ಯಾಯಾಲಯವೂ ಸಹ ಮುಕ್ತವಾಗಿರುತ್ತದೆ.

ಅಧಿವಿಚಾರಣಾ ನ್ಯಾಯಾಲಯವು, ಆಪಾದಿತಳ ನಡತೆಯೊಂದಿಗೆ ಮತ್ತು ಮಾಡಲಾದ ಅಪರಾಧವನ್ನು ಸಮವ್ಯಾಪಕಗೊಳಿಸಿ ಆಪಾದಿತನಿಗೆ ಶಿಕ್ಷೆಯನ್ನು ವಿಧಿಸುವಾಗ ಅದನ್ನು ತುಂಬಾ ಚೆನ್ನಾಗಿ ಗಮನಕ್ಕೆ ತೆಗೆದುಕೊಳ್ಳಬಹುದು.

41. ಮೇಲಿನ ಸದರಿ ಕಾರಣಗಳನ್ನು ದೃಷ್ಟಿಯಲ್ಲಿಟ್ಟುಕೊಂಡು, ಈ ಮುಂದಿನ ಆದೇಶವನ್ನು ಹೊರಡಿಸಿದೆ:

## ಆದೇಶ

ಕ್ರಿಮಿನಲ್ ಪುನರ್ ಪರಿಶೀಲನಾ ಅರ್ಜಿಯನ್ನು ಈ ಮೂಲಕ ಪುರಸ್ಕರಿಸಲಾಗಿದೆ. ಆನುಷಂಗಿಕವಾಗಿ, ದಿನಾಂಕ 25.8.2012ರ ಸಿಸಿ ಸಂ.439/ 2008ರಲ್ಲಿ ಅಧಿವಿಚಾರಣಾ ನ್ಯಾಯಾಲಯವು ಹೊರಡಿಸಿದ ಅಪರಾಧ ನಿರ್ಣಯದ ತೀರ್ಪು ಮತ್ತು ಶಿಕ್ಷೆಯನ್ನು ಮತ್ತು ದಿನಾಂಕ 20.11.2015ರ ಕ್ರಿಮಿನಲ್ ಅಪೀಲು ಸಂ.124/2012ರಲ್ಲಿ ಮೊದಲ ಅಪೀಲು ನ್ಯಾಯಾಲಯವು ಹೊರಡಿಸಿದ ತೀರ್ಪನ್ನೂ ಸಹ ಈ ಮೂಲಕ ತಳ್ಳಿ ಹಾಕಲಾಗಿದೆ.

ಅಷ್ಟೇ ಅಲ್ಲದೆ, ಭಾರತೀಯ ಸಾಕ್ಷ್ಯ ಅಧಿನಿಯಮದ 45ನೇ ಪ್ರಕರಣದ ಮೇರೆಗೆ ಅಪೀಲು ನ್ಯಾಯಾಲಯದ ಮುಂದೆ ಆಪಾದಿತಳು ಸಲ್ಲಿಸಿದ ಅರ್ಜಿಯನ್ನು ಈ ಮೂಲಕ ಪುರಸ್ಕರಿಸಲಾಗಿದೆ. ಒಪ್ಪಿತ ಸಹಿಗಳಿರುವ ನಿಶಾನೆ ಪಿ.1(ಎ) ಚೆಕ್ಕಿನ ಮೇಲಿರುವ ವಿವಾದಿತ ಸಹಿಗಳನ್ನು ಪರಿಶೀಲನೆಗಾಗಿ ಮತ್ತು ವರದಿ ನೀಡುವುದಕ್ಕಾಗಿ ವಿಧಿವಿಜ್ಞಾನ ತಜ್ಞರಿಗೆ ಕಳುಹಿಸಲು ಅಧಿವಿಚಾರಣಾ ನ್ಯಾಯಾಲಯವು ನಿರ್ದೇಶಿತವಾಗಿದೆ.

ಇದಾದ ನಂತರ ಅಗತ್ಯವಿದ್ದರೆ, ಹೆಚ್ಚಿನ ಸಾಕ್ಷ್ಯವನ್ನು ಮುನ್ನಡೆಸಲು ಪಕ್ಷಕಾರರಿಗೆ ಅನುಮತಿಸುವುದು ಮತ್ತು ದಾಖಲೆಯಲ್ಲಿರುವ ಎಲ್ಲಾ ಸಾಕ್ಷ್ಯಧಾರಗಳನ್ನು ಪರಿಗಣಿಸಿ ಕಾನೂನಿಗನುಸಾರವಾಗಿ ಹೊಸದಾಗಿ ಮೊಕದ್ದಮೆಯನ್ನು ವಿಲೇವಾರಿ ಮಾಡತಕ್ಕದ್ದು ಅಷ್ಟೇ ಅಲ್ಲದೆ,

(1) ಅನಗತ್ಯ ವಿಳಂಬವನ್ನು ತಪ್ಪಿಸುವ ಸಲುವಾಗಿ, 1.9.2016 ರಂದು ಪಕ್ಷಕಾರರನ್ನು ಅಧಿವಿಚಾರಣಾ ನ್ಯಾಯಾಲಯದ ಮುಂದೆ ಹಾಜರಾಗಲು ನಿರ್ದೇಶಿಸಲಾಗಿದೆ ಮತ್ತು ಮೊಕದ್ದಮೆಯನ್ನು ತ್ವರಿತವಾಗಿ ವಿಲೇ ಮಾಡಲು ನ್ಯಾಯಾಲಯಕ್ಕೆ ನೆರವಾಗುವುದು;

(2) ಮೊಕದ್ದಮೆಯ ವಿಲೇವಾರಿಯ ಸಮಯದಲ್ಲಿ ವಿವಾದಿತ ಚೆಕ್ ನಿಶಾನೆ ಪಿ.1ನ್ನು ಹಸ್ತಾಂತರಿಸಲು ಕೋರಿ, ಬಿಚೊಲಿಮ್ ಪೊಲೀಸ್, ಗೋವಾ ಇವರು ಮಾಡಿದ ಕೋರಿಕೆಯನ್ನಾಧರಿಸಿ ಸಮುಚಿತ ಆದೇಶವನ್ನು ಹೊರಡಿಸಲು ಅಧಿವಿಚಾರಣಾ ನ್ಯಾಯಾಲಯಕ್ಕೆ ನಿರ್ದೇಶಿಸಲಾಗಿದೆ;

(3) ವಿವಾದಿತ ಚೆಕ್ಕು ನಿಶಾನೆ ಪಿ.1ನ್ನು ತನಿಖೆಗಾಗಿ ಹಸ್ತಾಂತರಿಸಲು ಕೋರಿ ದಿನಾಂಕ 29.4.2016 ರಂದು ಬಿಚೊಲಿಮ್ ಗೋವಾ ಪೊಲೀಸರು ಮಾಡಿದ ಮನವಿ ಪತ್ರದೊಂದಿಗೆ ಕೂಡಲೇ ಅಧಿವಿಚಾರಣಾ ನ್ಯಾಯಾಲಯಕ್ಕೆ ದಾಖಲೆಗಳನ್ನು ಹಿಂತಿರುಗಿಸಲು ಈ ಮೂಲಕ ರಿಜಿಸ್ಟ್ರಿಯನ್ನೂ ಸಹ ನಿರ್ದೇಶಿಸಲಾಗಿದೆ.

(4) ಈ ಆದೇಶದ ಪ್ರವರ್ತನಾ ಭಾಗದ ಬಗ್ಗೆ ಸಂಬಂಧಪಟ್ಟ ಗೋವಾ ಪೊಲೀಸರು ಬಿಚೊಲಿಮ್ ಇವರಿಗೆ ತಿಳಿಸಲು ಸಹ ರಿಜಿಸ್ಟ್ರಿಯನ್ನು ನಿರ್ದೇಶಿಸಲಾಗಿದೆ.

---